ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಅಧೀನ ಉದ್ಯಮ)

**ಮೈಸೂರು - 570015**

ISO 9001 : 2008 ಮತ್ತು ISO 14001 : 2004 ಪ್ರಮಾಣೀಕೃತ ಕಂಪನಿ

**(ಮುಖ್ಯಮಂತ್ರಿ ವಾರ್ಷಿಕ ರತ್ನ ಪ್ರಶಸ್ತಿ ವಿಜೇತ ಕಂಪನಿ)**

# 71 ನೇ ವಾರ್ಷಿಕ ವರದಿ
# 2016 - 17

# *71st ANNUAL REPORT*
# *2016 - 17*

## MYSORE PAINTS & VARNISH LIMITED

**(A Govt. of Karnataka Undertaking)**

**Mysuru - 570 015**

An ISO 9001 : 2008 and ISO 14001: 2004 Certified Company

**(Chief Minister Ratna Award Company)**

# ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್

## ಮೈಸೂರು

## ಆಡಳಿತ ಮಂಡಳಿ

**ಶ್ರೀ ಹೆಚ್.ಎ. ವೆಂಕಟೇಶ್**
ಅಧ್ಯಕ್ಷರು

**ಡಾ. ಚಂದ್ರಶೇಖರ್ ದೊಡ್ಡಮನಿ**
ವ್ಯವಸ್ಥಾಪಕ ನಿರ್ದೇಶಕರು

| | | |
|---|---|---|
| ಶ್ರೀಮತಿ ಎನ್.ಆರ್. ಜಗನ್ನಾತ | : | ನಿರ್ದೇಶಕರು |
| ಶ್ರೀ ಸಿ.ಬಿ. ಶಂಕರ್ | : | ನಿರ್ದೇಶಕರು |
| ಶ್ರೀ ಸಿದ್ಧರಾಮೇಗೌಡ | : | ನಿರ್ದೇಶಕರು |
| ಶ್ರೀ ಎಸ್. ಸೀಗನಾಯಕ | : | ನಿರ್ದೇಶಕರು |
| ಶ್ರೀ ಸುದೇಶ್ ಬಾಬು | : | ನಿರ್ದೇಶಕರು |
| ಶ್ರೀಮತಿ ಯಶೋಧಾ ಮೋಟೆ ಬೆನ್ನೂರು | : | ನಿರ್ದೇಶಕರು |
| ಶ್ರೀಮತಿ ನಳಿನಿ ವಿಜಯರಾಜೇ ಅರಸ್ | : | ನಿರ್ದೇಶಕರು |

**ಆಡಿಟರುಗಳು :**

**ಮೆ|| ಕಿಚ್ಚ ಅಂಡ್ ಪ್ರಭು ಕೇಶವನ್**
ಚಾರ್ಟರ್ಡ್ ಅಕೌಂಟೆಂಟ್ಸ್, ಚನ್ನೈ

**ಕಾಸ್ಟ್ ಆಡಿಟರುಗಳು :**

**ಮೆ|| ಶ್ರೀ ಆರ್. ಪುರುಷೋತ್ತಮನ್**
ಕಾಸ್ಟ್ ಅಕೌಂಟೆಂಟ್ಸ್, ಮೈಸೂರು

**ಬ್ಯಾಂಕರುಗಳು :**

**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ**
ಮಾರ್ಕೆಟ್ ಶಾಖೆ, ಮೈಸೂರು

**ಕಾನೂನು ಸಲಹೆಗಾರರು :**

1. ಶ್ರೀ ಎ. ಸಿ. ನರೇಂದ್ರ
   ವಕೀಲರು, ಮೈಸೂರು

2. ಶ್ರೀ ಶಶಿಧರ್
   ವಕೀಲರು, ಮೈಸೂರು

**ಕಂಪನಿ ಕಾರ್ಯದರ್ಶಿಗಳು :**

ಶ್ರೀ ಎನ್. ರಾಜೇಶ್
ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿಗಳು
ಮೈಸೂರು

ಆಡಳಿತ ಕಛೇರಿ ಮತ್ತು ಕಾರ್ಖಾನೆ

# ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್

ಹೊಸ ಬನ್ನಿಮಂಟಪ ಬಡಾವಣೆ, ಮೈಸೂರು - 570 015

**ದೂರವಾಣಿ :** 0821-2493831, 2497469, 2492396

**ಫ್ಯಾಕ್ಸ್ :** 0821-2499466 **E-mail : info@mysorepaints.com**

**ವೆಬ್‌ಸೈಟ್ : www.mysorepaints.com**

**CIN No. : U51434KA1947SGC000503**

## ಮಾರಾಟ ಮಳಿಗೆಗಳು

**ಮೈಸೂರು**

ನಂ. 21, ಧನ್ವಂತರಿ ರಸ್ತೆ

ಮೈಸೂರು - 570 001

ದೂರವಾಣಿ : 0821-2429138

**ಮಧುರೈ**

ನಂ. 69 (ಮಹಡಿ)

ಸೌತ್‌ಮಾಸಿ ಸ್ಟ್ರೀಟ್, ಮದುರೈ - 625 001

ದೂರವಾಣಿ : 0452 - 2744671

**ಪ್ರಾದೇಶಿಕ ಕಛೇರಿ**

**ಬೆಂಗಳೂರು**

ಮೈ ಷುಗರ್ ಬಿಲ್ಡಿಂಗ್, ಮೊದಲನೇ ಮಹಡಿ

ಜೆ. ಸಿ. ರೋಡ್, ಬೆಂಗಳೂರು - 560 002

ದೂರವಾಣಿ : 080-22236608

# ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್

**ಮೈಸೂರು - 15**

## ನೋಟೀಸು

ಕಂಪನಿಯ ಸದಸ್ಯರುಗಳ 71ನೇ ವಾರ್ಷಿಕ ಸಭೆಯು ಈ ಕೆಳಗಿನ ಕಾರ್ಯಕಲಾಪಗಳನ್ನು ನಡೆಸುವ ಸಲುವಾಗಿ ಕಂಪನಿಯ ನೊಂದಾಯಿತ ಕಛೇರಿಯಲ್ಲಿ **ಮಂಗಳವಾರ 26ನೇ ಸೆಪ್ಟೆಂಬರ್ 2017** ರಂದು ಮಧ್ಯಾಹ್ನ 3.30 ಗಂಟೆಗೆ ನಡೆಯಲಿದೆಯೆಂದು ಈ ಮೂಲಕ ನೋಟೀಸು ನೀಡಲಾಗಿದೆ.

**ಸಾಮಾನ್ಯ ವ್ಯವಹಾರ :**

1. 31ನೇ ಮಾರ್ಚ್, 2017 ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ ಮತ್ತು ಅದೇ ದಿನಾಂಕದಂದು ಕೊನೆಗೊಳ್ಳುವ ಅವಧಿಯ ಲಾಭ ಮತ್ತು ನಷ್ಟದ ಲೆಕ್ಕವನ್ನು ಇದಕ್ಕೆ ಲಗತ್ತಿಸಿರುವ ಅನುಸೂಚಿಗಳು, ಟಿಪ್ಪಣಿಗಳು ಹಾಗೂ ನಿರ್ದೇಶಕರ, ಲೆಕ್ಕ ಪರಿಶೋಧಕರ ವರದಿಗಳೊಂದಿಗೆ ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಂಗೀಕರಿಸುವುದು.
2. 31ನೇ ಮಾರ್ಚ್, 2017 ರಂದು ಅಂತ್ಯಗೊಂಡ ಹಣಕಾಸು ವರ್ಷಕ್ಕೆ ಸಮಾನಾಂಶ ಷೇರುಗಳ ಮೇಲೆ ಲಾಭಾಂಶ ಘೋಷಿಸುವುದು.
3. ಸರದಿಯಂತೆ ಈ ಸಭೆಯಲ್ಲಿ ನಿವೃತ್ತರಾಗುತ್ತಿರುವ **ಶ್ರೀ ಸಿ.ಬಿ. ಶಂಕರ್** (DIN - 0007907865) ನಿರ್ದೇಶಕರು, ಇವರು ಅರ್ಹರಿದ್ದು, ಇವರನ್ನೇ ಮರುನೇಮಕಾತಿ ಮಾಡಲು ಪ್ರಸ್ತಾಪಿಸುವುದು.
4. ಲೆಕ್ಕ ಪರಿಶೋಧಕರಿಗೆ ಸಂಭಾವನೆಯನ್ನು ನಿಗದಿಪಡಿಸುವುದು.

ನಿರ್ದೇಶಕರ ಮಂಡಳಿ ಸದಸ್ಯರ ಅಪ್ಪಣೆ ಮೇರೆಗೆ

ಸಹಿ/-

**(ಡಾ. ಚಂದ್ರಶೇಖರ ದೊಡ್ಡಮನಿ)**

ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಮೈಸೂರು

ದಿನಾಂಕ : 30-08-2017

**ಸೂಚನೆಗಳು :**

1. ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗಲು ಮತ್ತು ಮತ ನೀಡಲು ಹಕ್ಕುಳ್ಳ ಸದಸ್ಯರು ತಮ್ಮ ಬದಲಿಗೆ ಹಾಜರಾಗಲು ಮತ್ತು ಮತ ನೀಡಲು ಪ್ರತಿನಿಧಿಯೊಬ್ಬರನ್ನು ನೇಮಿಸಬಹುದು ಮತ್ತು ಹೀಗೆ ನೇಮಿತರಾದ ಪ್ರತಿನಿಧಿಯು ಸದಸ್ಯರಾಗಿರಬೇಕೆಂಬ ನಿಯಮವೇನೂ ಇಲ್ಲ.
2. ಪ್ರತಿನಿಧಿಗಳನ್ನು ನೇಮಕ ಮಾಡಿರುವ ಪತ್ರಗಳನ್ನು ಸಭೆ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗೆ ಮುಂಚಿತವಾಗಿ ಕಂಪನಿಯ ನೊಂದಾಯಿತ ಕಛೇರಿಗೆ ಸಲ್ಲಿಸತಕ್ಕದ್ದು.

3. ಸದಸ್ಯರು/ಪ್ರತಿನಿಧಿಗಳು, ಸಭೆಗೆ ಹಾಜರಾಗಲು ಕಳುಹಿಸಲಾದ ಹಾಜರಾತಿ ಚೀಟಿಗಳನ್ನು ಭರ್ತಿ ಮಾಡಿ ತರತಕ್ಕದ್ದು.

4. ಕಂಪನಿಯ ಷೇರು ವರ್ಗಾವಣೆಯ ಪುಸ್ತಕಗಳು ದಿನಾಂಕ 17–09–2017 ರಿಂದ 26–09–2017 ರವರೆಗೆ ಮುಚ್ಚಲ್ಪಟ್ಟಿರುತ್ತವೆ.

5. ಕಂಪನಿಗಳ ಕಾಯ್ದೆ 2013 ರ ಪ್ರಕಾರ ಉಪಬಂಧಗಳಿಗೆ ಒಳಪಟ್ಟು ನಿರ್ದೇಶಕರ ಮಂಡಳಿಯು ಶಿಫಾರಸ್ಸು ಮಾಡಿದಂತೆ ಸಮಾನಾಂಶ ಷೇರುಗಳ ಮೇಲೆ ಲಾಭಾಂಶವನ್ನು ಸಭೆಯಲ್ಲಿ ಘೋಷಿಸಿದಲ್ಲಿ, ಅದನ್ನು ವಾರ್ಷಿಕ ಸರ್ವಸದಸ್ಯರ ಸಭೆಯ ದಿನಾಂಕದಂದು ಸದಸ್ಯರುಗಳ ದಾಖಲಾತಿ ಪುಸ್ತಕದಲ್ಲಿ ಹೆಸರು ನಮೂದಾಗಿರುವ ಸದಸ್ಯರಿಗೆ ದಿನಾಂಕ 26–10–2017 ರಿಂದ ನೀಡಲಾಗುವುದು.

6. 31ನೇ ಮಾರ್ಚ್, 2017 ರ ಲೆಕ್ಕಪತ್ರಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಚ್ಛಿಸುವ ಸದಸ್ಯರು ತಮ್ಮ ಮನವಿಗಳನ್ನು ವಾರ್ಷಿಕ ಸರ್ವಸದಸ್ಯರ ಸಭೆಗೆ ನಿಗದಿಪಡಿಸಿದ ದಿನಾಂಕಕ್ಕಿಂತ ಕಡೇ ಪಕ್ಷ ಏಳು ದಿನಗಳ ಮೊದಲೇ ಕಂಪನಿಗೆ ಕಳುಹಿಸಲು ಕೋರಿದೆ.

7. **ಷೇರುದಾರರು ತಮ್ಮ ಅಂಚೆ ವಿಳಾಸ/ಇ–ಮೇಲ್ ವಿಳಾಸದಲ್ಲೇನಾದರೂ ಬದಲಾವಣೆ ಇದ್ದರೆ ತಿಳಿಸಲು ಮತ್ತು ಲಾಭಾಂಶದ ವಿಷಯಗಳನ್ನೊಳಗೊಂಡ ಇತರೇ ಎಲ್ಲಾ ಪತ್ರ ವ್ಯವಹಾರಗಳನ್ನು ಪ್ರಭಾರ ಕಂಪನಿ ಕಾರ್ಯದರ್ಶಿ, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್, ಹೊಸ ಬನ್ನಿ ಮಂಟಪ ಬಡಾವಣೆ, ಮೈಸೂರು–570015 ವಿಳಾಸಕ್ಕೆ ಅಥವಾ ಇ–ಮೇಲ್ info@mysorepaints.com ಮೂಲಕ ಕಳುಹಿಸಲು ಕೋರಿದೆ.**

8. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರುವ ಸದಸ್ಯರು ತಾವು ನೀಡುವ ಪ್ರಾಕ್ಸಿಗಳನ್ನು ವಾರ್ಷಿಕ ಸಾಮಾನ್ಯ ಸಭೆ ಜರುಗುವ 24 ಗಂಟೆ ಮುಂಚಿತವಾಗಿ ಪರಿವೀಕ್ಷಿಸಬಹುದಾಗಿದೆ. ಈ ರೀತಿ ಪರಿವೀಕ್ಷಿಸಲು ಬಯಸುವ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆ ಜರುಗುವ ಮೂರು ದಿನಗಳ ಮುಂಚಿತವಾಗಿ ತಮ್ಮ ಮನವಿಯನ್ನು ಕಂಪನಿಗೆ ದಾಖಲಿಸಬೇಕಾಗುತ್ತದೆ.

9. ಲಾಭಾಂಶದ ಕೋರಿಕೆ ಸಲ್ಲಿಸದಂಥ ಸದಸ್ಯರು ಲಾಭಾಂಶದ ಕೋರಿಕೆಗೆ ನಿಗಮದ ನೊಂದಾಯಿತ ಕಚೇರಿಯಲ್ಲಿನ ಪ್ರಭಾರ ಕಂಪನಿ ಕಾರ್ಯದರ್ಶಿಗಳ ಜೊತೆ ಪತ್ರ ವ್ಯವಹಾರ ನಡೆಸಲು ಕೋರಿದೆ. ಕಂಪನಿಯ ಬಾಕಿ ಲಾಭಾಂಶ ಖಾತೆಗೆ ವರ್ಗಾಯಿಸಿದ ದಿನಾಂಕದಿಂದ ಏಳು ವರ್ಷಗಳ ಒಳಗಾಗಿ ಕೋರಿಕೆ ಸಲ್ಲಿಸದಂಥ ಲಾಭಾಂಶವನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ 124 ಪ್ರಕಾರ, ಹೂಡಿಕೆದಾರರ ಶಿಕ್ಷಣ ಮತ್ತು ಭದ್ರತಾ ನಿಧಿಗೆ ವರ್ಗಾಯಿಸಲಾಗುತ್ತದೆಂಬುದನ್ನು ಗಮನಿಸಲು ಸದಸ್ಯರುಗಳನ್ನು ಕೋರಲಾಗಿದೆ.

**10. ಮೈಸೂರು ಪೇಯಿಂಟ್ಸ್ ಪರಿಸರದ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಣೀಯ ರೀತಿಯಲ್ಲಿ ಉಪಯೋಗಿಸುತ್ತದೆ. ಮಿನಿಸ್ಟ್ರಿ ಆಫ್ ಕಾರ್ಪೊರೇಟ್ ಅಫೇರ್ಸ್ (ಎಂಸಿಎ), ಭಾರತ ಸರ್ಕಾರ, ತನ್ನ ಸುತ್ತೋಲೆ ಸಂ. 17/2011 ಮತ್ತು 18/2011 ಅನುಕ್ರಮವಾಗಿ ದಿನಾಂಕ ಏಪ್ರಿಲ್ 21, 2011 ಮತ್ತು ಏಪ್ರಿಲ್ 29, 2011 ಮೂಲಕ, ಸಾಂಸ್ಥಿಕ ಪ್ರಶಾಶನದಲ್ಲಿ ಹಸಿರು ಉಳಿಕೆಯ ಮೊದಲ ಹೆಜ್ಜೆಯ ಭಾಗವಾಗಿ ತನ್ನ ಷೇರುದಾರರಿಗೆ ಕಚೇರಿ ದಾಖಲಾತಿಗಳನ್ನು ವಿದ್ಯುನ್ಮಾನದ ಮೂಲಕ ಕಳುಹಿಸಲು ಅವಕಾಶ ಮಾಡಿಕೊಟ್ಟಿರುತ್ತದೆ. ಸದರಿ ಸುತ್ತೋಲೆಯ ಸ್ಫೂರ್ತಿಯನ್ನು ಗುರುತಿಸಿ, ಈ ವರ್ಷದಿಂದ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರಗಳು, ಹಣಕಾಸು ತ:ಖ್ತೆಗಳು, ನಿರ್ದೇಶಕರ ವರದಿ, ಲೆಕ್ಕ ಪರಿಶೋಧಕರ ವರದಿ, ಮುಂತಾದವುಗಳನ್ನು ಷೇರುದಾರರು ಕಂಪನಿಗೆ ನೀಡಿರುವ ಇ–ಮೇಲ್ ವಿಳಾಸಕ್ಕೆ ಕಳುಹಿಸಲಾಗುತ್ತದೆ. ಹೊಸ ಕ್ರಮಗಳನ್ನು ತಕ್ಷಣದಿಂದಲೇ ಕಾರ್ಯಗತಗೊಳಿಸುವುದು ಹಾಗೂ 2016–17ನೇ ಸಾಲಿನ ವಾರ್ಷಿಕ ವರದಿಗಳನ್ನು ವಿದ್ಯುನ್ಮಾನ ಅಂಚೆ ಮೂಲಕ ಕಳುಹಿಸಲಾಗುವುದು.**

11. ಸೆಬಿ (SEBI) ಮಾರ್ಗ ಸೂಚಿಗಳ ಪ್ರಕಾರ ಪ್ರತಿಯೊಬ್ಬ ಷೇರುದಾರರು ತಮ್ಮ 'PAN' ಸಂಖ್ಯೆಯನ್ನು ಕಂಪನಿಗೆ ಸಲ್ಲಿಸತಕ್ಕದ್ದು.

# ನಿರ್ದೇಶಕರ ವರದಿ

**ಸನ್ಮಾನ್ಯ ಸದಸ್ಯರುಗಳಿಗೆ,**

ಕಂಪನಿಯ ಆಡಳಿತ ಮಂಡಳಿ ಪರವಾಗಿ 31ನೇ ಮಾರ್ಚ್, 2017ನೇ ವರ್ಷಕ್ಕೆ ಕೊನೆಗೊಂಡ ಅವಧಿಗೆ ಕಂಪನಿಯ ವ್ಯವಹಾರ ನಿರ್ವಹಣೆಗಳ ವರದಿಯನ್ನು ಪರಿಶೋಧಿತ ಲೇಣಿದೇಣಿ ಪಟ್ಟಿ ಮತ್ತು ಲಾಭ ನಷ್ಟದ ವಿವರಣಾ ಪಟ್ಟಿಯೊಂದಿಗೆ ತಮ್ಮ ಮುಂದೆ ಮಂಡಿಸಲು  ಹರ್ಷಿಸುತ್ತೇವೆ.

1. **ನಿರ್ವಹಣೆಯ ಫಲಿತಾಂಶಗಳು :**

(ರೂ. ಲಕ್ಷಗಳಲ್ಲಿ)

| **ವಿವರಗಳು** | **2016–17** | **2015–16** |
|---|---|---|
| * ಮಾರಾಟ | 2846.93 | 3823.80 |
| * ಇತರೇ ಆದಾಯ | 295.17 | 264.42 |
| * ಒಟ್ಟು ವೆಚ್ಚಗಳು | 2215.90 | 2420.93 |
| * **ಲಾಭ** – ತೆರಿಗೆಗೆ ಮುಂಚೆ | **618.96** | **1250.36** |
| * **ಲಾಭ** – ತೆರಿಗೆಯ ನಂತರ | **404.07** | **813.73** |

ಕಂಪನಿಯು **507.47** ಮೆಟ್ರಿಕ್ ಟನ್‌ಗಳ (ಹಿಂದಿನ ವರ್ಷ – 391.00 ಮೆಟ್ರಿಕ್ ಟನ್) ಬಣ್ಣ ಹಾಗೂ ಇತರೇ ಉತ್ಪನ್ನಗಳನ್ನು ಉತ್ಪಾದಿಸಿರುತ್ತದೆ.

2. **ಲಾಭಾಂಶ :**

ಕಂಪನಿಯ ಕಾರ್ಯಸಾಧನೆಯ ಆಧಾರದ ಮೇಲೆ, ನಿಮ್ಮ ನಿರ್ದೇಶಕರುಗಳು 2016–17ನೇ ವರ್ಷಕ್ಕೆ ಶೇ. 25% ರಷ್ಟು ಡಿವಿಡೆಂಡನ್ನು ನೀಡಲು (ರೂ.2.50 ಪ್ರತಿ 10 ರೂ. ಸಮಾನಾಂಶ ಷೇರಿಗೆ) ಸದಸ್ಯರ ಅನುಮೋದನೆಗೆ ಶಿಫಾರಸ್ಸು ಮಾಡಲು ಹರ್ಷಿಸುತ್ತಾರೆ. ಡಿವಿಡೆಂಡ್‌ಗೆ ಸದಸ್ಯರಿಂದ ಒಪ್ಪಿಗೆ ದೊರೆತಲ್ಲಿ ಡಿವಿಡೆಂಡ್ ತೆರಿಗೆ ಸೇರಿ ರೂ.30,95,367.00 ಲಕ್ಷಗಳ ನಗದು ಹೊರಹರಿವು ಒಳಗೊಳ್ಳುತ್ತದೆ. ಅನುಮೋದಿತ ಡಿವಿಡೆಂಡನ್ನು ಅನ್ವಯಿಸುವ ನಿಯಮಗಳ ರೀತ್ಯ ಪಾವತಿ ಮಾಡಲಾಗುವುದು.

ಸದಸ್ಯರುಗಳ ದಾಖಲಾತಿ ಪುಸ್ತಕ ಹಾಗೂ ಷೇರು ವರ್ಗಾವಣೆ ದಾಖಲಾತಿ ಪುಸ್ತಕಗಳು ದಿನಾಂಕ 17–9–2017 ರಿಂದ 26–09–2017 ವರೆಗಿನ ಅವಧಿಯಲ್ಲಿ (ಎರಡೂ ದಿನಗಳು ಸೇರಿ) ಮುಚ್ಚಲ್ಪಟ್ಟಿರುತ್ತವೆ. ನಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 26–09–2017 ರಂದು ನಡೆಸಲು ನಿಗದಿಪಡಿಸಲಾಗಿದೆ.

3. **ಯಾವುದಾದರೂ ನಿಧಿಗಳಿಗೆ ವರ್ಗಾಯಿಸಬಹುದಾದ ಮೊತ್ತದ ಪ್ರಸ್ತಾವನೆಗಳು :**

ಕಂಪನಿಯು ಪ್ರಸಕ್ತ ಸಾಲಿನಲ್ಲಿ ರೂ. 40,40,681–00 ಗಳನ್ನು ಸಾಮಾನ್ಯ ನಿಧಿಗೆ ವರ್ಗಾಯಿಸುವ ಪ್ರಸ್ತಾವನೆ ಹೊಂದಿರುತ್ತದೆ.

**4. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಮತ್ತು ಈ ವರದಿ ಸಲ್ಲಿಸುವ ಅವಧಿಯೊಳಗೆ ಹಣಕಾಸು ಸ್ಥಿತಿಗತಿಯಲ್ಲಿ ಆಗಿರಬಹುದಾದ ಬದಲಾವಣೆಗಳು ಮತ್ತು ಬಾಧ್ಯತೆಗಳ ಬಗ್ಗೆ :**

ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಮತ್ತು ಈ ವರದಿ ಸಲ್ಲಿಸುವ ಅವಧಿಯೊಳಗೆ ಹಣಕಾಸು ಸ್ಥಿತಿಗತಿಯಲ್ಲಿ ಆಗಿರಬಹುದಾದ ಬದಲಾವಣೆಗಳು ಮತ್ತು ಬಾಧ್ಯತೆಗಳು ಇರುವುದಿಲ್ಲ.

**5. ನಿರ್ದೇಶಕರ ಮಂಡಳಿ :**

ಕಂಪನಿಯು ನಿರ್ದೇಶಕರ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿದೆ. ಶ್ರೀ ಹೆಚ್.ಎ. ವೆಂಕಟೇಶ್ ರವರು ಅಧ್ಯಕ್ಷರಾಗಿದ್ದು ಮತ್ತು ಡಾ. ಚಂದ್ರಶೇಖರ ದೊಡ್ಡಮನಿ ರವರು ವ್ಯವಸ್ಥಾಪಕ ನಿರ್ದೇಶಕರಾಗಿರುತ್ತಾರೆ. ಉಳಿದ ನಿರ್ದೇಶಕರುಗಳು ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟವರಾಗಿದ್ದು, ಸ್ವತಂತ್ರ ನಿರ್ದೇಶಕರಂತೆ ಕಾರ್ಯ ನಿರ್ವಹಿಸುತ್ತಾರೆ.

**ಮಂಡಳಿ ಸಭೆಗಳು :** 31ನೇ ಮಾರ್ಚ್, 2017 ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದಲ್ಲಿ ನಾಲ್ಕು ಮಂಡಳಿ ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಗಳನ್ನು ದಿನಾಂಕ 02.07.2016, 22.08.2016, 19.10.2016 ಮತ್ತು 07–01–2017 ರಂದು ನಡೆಸಲಾಗಿರುತ್ತದೆ. ಎರಡು ಸಭೆಗಳ ನಡುವಿನ ಅಂತರ ಶಾಸನಬದ್ಧ ನಿಯಮಾವಳಿಗಳ ಮಿತಿಯ ಅನುಸಾರ ಇರುತ್ತದೆ.

ಕಂಪನಿಯ 70ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 27–09–2016ರಂದು ಕಂಪನಿಯ ನೊಂದಾಯಿತ ಕಚೇರಿಯಲ್ಲಿ ಜರುಗಿಸಲಾಗಿದೆ.

ಆಡಿಟ್ ಕಮಿಟಿ, ನಾಮಿನೇಷನ್ & ರೆಮ್ಯೂನರೇಷನ್ ಕಮಿಟಿ & ಸ್ಟೇಕ್ ಹೋಲ್ಡರ್ಸ್ ರಿಲೇಷನ್‌ಷಿಪ್ ಕಮಿಟಿ ರಚನೆ ನಮ್ಮ ಕಂಪನಿಗೆ ಅನ್ವಯಿಸುವುದಿಲ್ಲ.

**6. ಆಡಳಿತ ಮಂಡಳಿಯ ವಾರ್ಷಿಕ ಔಪಚಾರಿಕ ಮೌಲ್ಯಮಾಪನದ ಬಗ್ಗೆ :**

ನಮ್ಮ ಕಂಪನಿಯು ಕರ್ನಾಟಕ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿದ್ದು, ನಿರ್ದೇಶಕರುಗಳನ್ನು ಸರ್ಕಾರವೇ ನೇಮಕ ಮಾಡುವುದರಿಂದ ಅವರ ಮೌಲ್ಯಮಾಪನವನ್ನು ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳ ಪ್ರಕಾರ ಮೌಲ್ಯಮಾಪನ ನಡೆಯುತ್ತದೆ. ಕಾರ್ಪೋರೇಟ್ ಅಫೇರ್ಸ್ ಮಂತ್ರಾಲಯ, ಭಾರತ ಸರ್ಕಾರ, ಇದರ ಅಧಿಸೂಚನೆ ದಿನಾಂಕ 05–06–2015ರ ರೀತ್ಯಾ ಸರ್ಕಾರಿ ಕಂಪನಿಗಳ ನಿರ್ದೇಶಕರ ವಾರ್ಷಿಕ ಮೌಲ್ಯಮಾಪನ ಪ್ರಕ್ರಿಯೆಯಿಂದ ವಿನಾಯಿತಿ ಇರುತ್ತದೆ.

**7. ನಿರ್ದೇಶಕರ ಜವಾಬ್ದಾರಿ ಬಗ್ಗೆ ಹೇಳಿಕೆ :**

ಕಂಪನಿಗಳ ಕಾಯ್ದೆ, 2013 ರ ಪರಿಚ್ಛೇದ 134 (5) ಪ್ರಕಾರ ನಿಮ್ಮ ನಿರ್ದೇಶಕರು ದೃಢೀಕರಿಸುವುದೇನೆಂದರೆ,

i. 2016–17ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಸಮರ್ಪಿಸುವಾಗ ಅನ್ವಯವಾಗುವ ಲೆಕ್ಕಪತ್ರ ತಯಾರಿಕಾ ಮಾನದಂಡಗಳನ್ನು ಅನುಸರಿಸಲಾಗಿದೆ.

ii. ಮಾರ್ಚ್ 31, 2017 ರಂದು ಇದ್ದಂತೆ ಕಂಪನಿಯ ಸಮಗ್ರ ವ್ಯವಹಾರದ ಸ್ಥಿತಿಯ ಬಗ್ಗೆ ಹಾಗೂ ಏಪ್ರಿಲ್ 1, 2016 ರಿಂದ ಮಾರ್ಚ್ 31, 2017 ರ ವರೆಗಿನ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ಖಾತೆಯ ನೈಜ ಹಾಗೂ ನ್ಯಾಯೋಚಿತವಾದ ಚಿತ್ರಣ ನೀಡಲು ಅನುವಾಗುವ ರೀತಿಯಲ್ಲಿ ಸೂಕ್ತ ಲೆಕ್ಕ ಪತ್ರ ನೀತಿಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಸತತವಾಗಿ ಅನುಸರಿಸುತ್ತಾ ಬಂದಿದ್ದು ವಿವೇಚನಾಯುಕ್ತ ಹಾಗೂ ವಿವೇಕಪೂರ್ಣ ತೀರ್ಮಾನ ಮತ್ತು ಅಂದಾಜುಗಳನ್ನು ಮಾಡಲಾಗಿದೆ.

iii. ಕಂಪನಿಯ ಆಸ್ತಿಗಳ ರಕ್ಷಣೆಗೆ ಮತ್ತು ಮೋಸ ಮತ್ತು ವಂಚನೆಯನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ಕಂಪನಿಗಳ ಅಧಿನಿಯಮ, 2013 ರ ಉಪಬಂಧಗಳಿಗನುಗುಣವಾಗಿ ಸೂಕ್ತ ಲೆಕ್ಕಪತ್ರಗಳ ದಾಖಲೆಗಳನ್ನು ಇಟ್ಟುಕೊಂಡಿದ್ದು ಸಾಕಷ್ಟು ಸಮರ್ಪಕವಾದ ಎಚ್ಚರಿಕೆಯನ್ನು ವಹಿಸಲಾಗಿದೆ.

iv. ವಾರ್ಷಿಕ ಲೆಕ್ಕಪತ್ರಗಳನ್ನು ಮುಂದುವರಿಯುತ್ತಿರುವ ಸಂಸ್ಥೆಯೆಂಬ ಆಧಾರದ ಮೇಲೆ ತಯಾರಿಸಲಾಗಿದೆ.

**8. ಷೇರು ಬಂಡವಾಳ :**

ಕಂಪನಿಯ ಅಧಿಕೃತ ಬಂಡವಾಳ ರೂ. 1,50,00,000 ಇದ್ದು, ನೀಡಲ್ಪಟ್ಟ ಮತ್ತು ಪಾವತಿಸಲ್ಪಟ್ಟ ಷೇರು ಬಂಡವಾಳ ರೂ. 1,03,65,500 ಆಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ Rule 4 (4), 8(13), 12(9) of Companies (Share Capital and Debentures) Rule, 2014, ಅಡಿಯಲ್ಲಿ ನೀಡಬೇಕಾದ ಪ್ರಕಟಣೆಯು ನಮ್ಮ ಕಂಪನಿಗೆ ಅನ್ವಯಿಸುವುದಿಲ್ಲ. ಮುಂದುವರೆದು ಈ ಸಾಲಿನಲ್ಲಿ ಯಾವುದೇ ಬೋನಸ್ ಷೇರುಗಳನ್ನು ನೀಡಿರುವುದಿಲ್ಲ ಮತ್ತು ಯಾವುದೇ ಷೇರುಗಳನ್ನು Buy back ಮಾಡಿರುವುದಿಲ್ಲ.

**9. ಶಕ್ತಿ ಸಂರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನ ವಿಲೀನ, ವಿದೇಶಿ ವಿನಿಮಯ ಗಳಿಕೆ ಹಾಗೂ ವೆಚ್ಚ:**

ಕಂಪನಿಗಳ ಕಾಯ್ದೆ 2013 ರ ಪರಿಚ್ಛೇದ 134(3)(m) ರೊಂದಿಗೆ ಓದಲ್ಪಡುವ ಕಂಪನಿಗಳ ನಿಯಮಗಳು, 2014 ರಲ್ಲಿ ನಿಗದಿಪಡಿಸಲಾದ ವಿವರಗಳನ್ನು ಕೆಳಗಿನಂತೆ ತೋರಿಸಲಾಗಿದೆ.

**(ಅ) ಶಕ್ತಿ ಸಂರಕ್ಷಣೆ :** ಕಂಪನಿಯ ಕಾರ್ಯನಿರ್ವಹಣೆಗಳು ಕಡಿಮೆ ಶಕ್ತಿ ಬಳಕೆಯನ್ನು ಒಳಗೊಂಡಿರುತ್ತವೆ. ಮುಂದುವರೆದು, ಕಂಪನಿಯು ನಮೂನೆ–ಎ ರಲ್ಲಿ ಒದಗಿಸಬೇಕಾದಂಥ ಉದ್ದಿಮೆಗಳ ಪಟ್ಟಿಯಲ್ಲಿ ಸೇರಿಲ್ಲವಾದ್ದರಿಂದ ಬಹಿರಂಗಪಡಿಸುವ ಅಗತ್ಯತೆಗಳು ಕಂಪನಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ ಶಕ್ತಿ ಸಂರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂದುವರೆದು ಕಂಪನಿಯು ಹಾಲಿ ಇರುವ ಟ್ಯೂಬ್‌ಲೈಟ್ಸ್‌ಗಳ ಜಾಗದಲ್ಲಿ ಸಿಎಫ್‌ಎಲ್, ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ.

**(ಆ) ತಂತ್ರಜ್ಞಾನ ವಿಲೀನ, ಅಳವಡಿಕೆ ಮತ್ತು ಬದಲಾವಣೆ :**

ಪ್ರಸ್ತುತ ವರ್ಷದಲ್ಲಿ ಕಂಪನಿಯು ಯಾವುದೇ ತಂತ್ರಜ್ಞಾನವನ್ನು ಆಮದು ಮಾಡಿಕೊಂಡಿರುವುದಿಲ್ಲ ಹಾಗೂ ಉತ್ಪಾದಕತೆ ಮತ್ತು ಉತ್ಪಾದಿಸುವ ಉತ್ಪನ್ನಗಳ ಗುಣಮಟ್ಟ ಸುಧಾರಣೆಗೆ ಇಲ್ಲಿಯೇ ಲಭ್ಯವಿರುವ ತಂತ್ರಜ್ಞಾನಗಳ ಉಪಯೋಗವನ್ನು ಮುಂದುವರೆಸಿರುತ್ತದೆ.

**(ಇ) ಸಂಶೋಧನೆ ಮತ್ತು ಅಭಿವೃದ್ಧಿ:**

ಪ್ರಸಕ್ತ ವರ್ಷದಲ್ಲಿ ಕಂಪನಿಯು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಪಿ.ಯು. ಬಣ್ಣಗಳ ತಯಾರಿಕೆಯಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿರುತ್ತದೆ. ಮುಂದುವರೆದು ಇಂಡೆಲಿಬಲ್ ಇಂಕ್ ಮಾರ್ಕರ್ ಪೆನ್ ತಯಾರಿಕೆ ಸಂಬಂಧ ಸಂಶೋಧನೆ ಮತ್ತು ಅಭಿವೃದ್ಧಿ ಹಿತದೃಷ್ಟಿಯಿಂದ ರೂ. 11.50 ಲಕ್ಷಗಳನ್ನು (ತೆರಿಗೆ ಸೇರಿ) ನ್ಯಾಷನಲ್ ಕೆಮಿಕಲ್ ಲ್ಯಾಬೊರೇಟರಿ (ಭಾರತ ಸರ್ಕಾರದ ಭೌತಿಕ ಪ್ರಯೋಗಾಲಯ), ಪುಣೆ, ಇವರಿಗೆ ನೀಡಲಾಗಿದೆ.

**(ಈ) ವಿದೇಶಿ ವಿನಿಮಯ ಗಳಿಕೆ ಹಾಗೂ ವೆಚ್ಚ :**

ವಿದೇಶಿ ವಿನಿಮಯ ಆದಾಯ ಹಾಗೂ ಬಂಡವಾಳ ವೆಚ್ಚ ಹಾಗೂ ರಾಜಸ್ವ ವ್ಯಯಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| | | | |
|---|---|---|---|
| ಎ) | ರಫ್ತು ವಹಿವಾಟಿನಿಂದ ಗಳಿಸಿದ ವಿದೇಶಿ ವಿನಿಮಯ | : | ರೂ.85,79,650.00<br>(ಹಿಂದಿನ ವರ್ಷ ರೂ.,44,69,194.00) |
| ಬಿ) | ಇತರೆ ಮೂಲಗಳಿಂದ ಗಳಿಸಿದ ವಿದೇಶಿ ವಿನಿಮಯ | : | ರೂ. ಇಲ್ಲ<br>(ಹಿಂದಿನ ವರ್ಷ ಇಲ್ಲ) |
| ಸಿ) | ನಿವ್ವಳ ವಿದೇಶಿ ವಿನಿಮಯದ ಆದಾಯ | : | ರೂ.85,79,650.00<br>(ಹಿಂದಿನ ವರ್ಷ ರೂ.44,69,194.00) |

**10. ಒಪ್ಪಂದದ ವಿವರಗಳು :**

ಪ್ರಸಕ್ತ ಸಾಲಿನಲ್ಲಿ ಕಂಪನಿಯು 'Form AOC-2' ನಲ್ಲಿ ಬಹಿರಂಗಗೊಳಿಸುವಂಥಹ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ. ಕಾರ್ಪೋರೇಟ್ ಅಫೇರ್ಸ್ ಮಂತ್ರಾಲಯ, ಭಾರತ ಸರ್ಕಾರ, ಇದರ ಅಧಿಸೂಚನೆ ದಿನಾಂಕ 05–06–2016ರ ಪ್ರಕಾರ 2013ರ ಕಂಪನಿಗಳ ಕಾಯಿದೆ ಕಾಲಂ 188(1) ನಿಯಮಗಳು ಹೇಳುವಂತೆ ಎರಡು ಸರ್ಕಾರಿ ಕಂಪನಿಗಳ ನಡುವೆ ಜರುಗಬಹುದಾದ ವ್ಯವಹಾರಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.

**11. ಸಾಲ, ಖಾತರಿ ಮತ್ತು ಹೂಡಿಕೆಗಳ ವಿವರಗಳು :**

ಕಂಪನಿಗಳ ಕಾಯಿದೆ 2013 ಕಾಲಂ 186ರ ಪ್ರಕಾರ ಕಂಪನಿಯು ಪಡೆದಿರುವ ಸಾಲ, ನೀಡಿರುವ ಖಾತರಿ ಮತ್ತು ಹೂಡಿಕೆಗಳ ವಿವರಗಳನ್ನು ಈ ವರದಿಯೊಂದಿಗೆ ಅನುಬಂಧಿಸಿರುವ ಹಣಕಾಸು ಫಲಿತಾಂಶಗಳಲ್ಲಿ ನೀಡಲಾಗಿರುತ್ತದೆ.

**12. ಅಪಾಯ ಎದುರಿಸುವ ನಿರ್ವಹಣಾ ನೀತಿ :**

ಕಂಪನಿಯು ತನ್ನ ದಿನವಹಿ ವಹಿವಾಟಿನಲ್ಲಿ ಎದುರಿಸಬಹುದಾದ ಅಪಾಯಗಳ ಬಗ್ಗೆ ವ್ಯವಸ್ಥಾಪಕರುಗಳ ತಂಡ ನಿಗಾ ವಹಿಸಿರುತ್ತದೆ. ಆಡಳಿತ ಮಂಡಳಿಯ ಅಭಿಪ್ರಾಯದ ಪ್ರಕಾರ ಕಂಪನಿಯ ವಹಿವಾಟಿಗೆ ತೊಡಕಾಗಬಹುದಾದ ಅಂತಹ ಅಪಾಯಗಳು ಇರುವುದಿಲ್ಲವೆಂದು ತಿಳಿದುಬಂದಿದೆ.

**13. ಪ್ರಾಧಿಕಾರಗಳು ಅಥವಾ ನ್ಯಾಯಾಲಯಗಳು ನೀಡಿರುವ ಮಹತ್ವದ ಆದೇಶಗಳ ಬಗ್ಗೆ :**

ಕಂಪನಿಯ ಅಸ್ತಿತ್ವಕ್ಕೆ ಅಥವಾ ವಹಿವಾಟಿಗೆ ದಕ್ಕೆಯಾಗುವಂತಹ ಯಾವುದೇ ಮಹತ್ವದ ಆದೇಶಗಳು ನ್ಯಾಯಾಲಯ ಅಥವಾ ಯಾವುದೇ ಶಾಸನ ಬದ್ಧ ಪ್ರಾಧಿಕಾರಗಳಿಂದ ಬಂದಿರುವುದಿಲ್ಲ.

**14. ಕಂಪನಿಯ ಸಹಭಾಗಿತ್ವದಲ್ಲಿ ನಿರ್ವಹಿಸಿರುವ ಅಂಗಸಂಸ್ಥೆ ಅಥವಾ ಸಹವರ್ತಿತ ಕಂಪನಿಗಳು :**

ಪ್ರಸ್ತುತ ಸಾಲಿನಲ್ಲಿ ಕಂಪನಿಯು ಯಾವುದೇ ಅಂಗಸಂಸ್ಥೆಗಳು ಅಥವಾ ಸಹಭಾಗಿತ್ವದ ಅಥವಾ ಸಹವರ್ತಿತ ಕಂಪನಿಗಳನ್ನು ಹೊಂದಿರುವುದಿಲ್ಲ.

**15. ಕಂಪನಿಯ ನಾಮಾಂಕಿತವನ್ನು ಬದಲಾಯಿಸುವ ಪ್ರಸ್ತಾವನೆ :**

ಆಡಳಿತ ಮಂಡಳಿಯು ಕಂಪನಿಯ ಹಾಲಿ ನಾಮಾಂಕಿತ "ಮೈಸೂರು ಪೆಯಿಂಟ್ಸ್ & ವಾರ್ನಿಷ್ ಲಿಮಿಟೆಡ್" ಎಂಬುದನ್ನು "ಮೈಸೂರು ಪೆಯಿಂಟ್ಸ್ ಲಿಮಿಟೆಡ್" ಎಂದು ಬದಲಾಯಿಸಲು ನಿರ್ಣಯಿಸಿ, ಷೇರುದಾರರ ಗಮನಕ್ಕೆ ತರಲು ನಿರ್ಧರಿಸಲ್ಪಟ್ಟಿರುತ್ತದೆ. ವಾರ್ಷಿಕ ಸಾಮಾನ್ಯ ಸಭೆಯ ನಂತರ ಈ ಬಗ್ಗೆ ತೆಗೆದುಕೊಳ್ಳಬೇಕಾದ ಶಾಸನಬದ್ಧ ಕ್ರಮಗಳನ್ನು ಜರುಗಿಸಲು ಸಭೆಯ ಮುಂದೆ ಪ್ರಸ್ತಾಪಿಸಲಾಗಿದೆ.

**16. ಕಂಪನಿಯ ಸಾಮಾಜಿಕ ಹೊಣೆಗಾರಿಕೆ ನೀತಿ :**

ಅ) **ಸಾಮಾಜಿಕ ಹೊಣೆಗಾರಿಕೆ ನೀತಿಯ ಸ್ಥೂಲ ಚಿತ್ರಣ** : ಕಂಪನಿಯು ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡ ಅಂಶಗಳನ್ನು ಪಾಲಿಸಲು ಬದ್ಧವಾಗಿರುತ್ತದೆ.

ಪರಿಸರ ಸಂರಕ್ಷಣೆ, ನೈಸರ್ಗಿಕವಾಗಿ ಲಭ್ಯವಾಗುವ ಎಲ್ಲಾ ಸಂಪನ್ಮೂಲಗಳ ಬಳಕೆ, ಶಿಕ್ಷಣದ ಅಭಿವೃದ್ಧಿ, ಕೌಶಲ್ಯ ಅಭಿವೃದ್ಧಿ, ಉತ್ತಮ ಆರೋಗ್ಯಕ್ಕಾಗಿ ಅನುಸರಿಸಬೇಕಾದ ಮುನ್ನೆಚ್ಚರಿಕೆ, ಶುಚಿತ್ವ ಕಾಪಾಡಲು ಮತ್ತು ಕುಡಿಯುವ ನೀರಿನ ಸೌಲಭ್ಯ, ನಿರ್ಗತಿಕರ ಮತ್ತು ಬಡವರ ಏಳಿಗೆಗಾಗಿ ಧನ ಸಹಾಯ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ, ಪರಿಶಿಷ್ಟ ಜಾತಿ ಮತ್ತು ವರ್ಗ, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ಶಿಕ್ಷಣ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು ಶ್ರಮಿಸಲಾಗುತ್ತಿದೆ. ನೈಸರ್ಗಿಕ ವಿಕೋಪ ಮತ್ತು ಪರಿಹಾರ ನಿಧಿಗೆ ಕೊಡುಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೇಲಿನ ಕಾರ್ಯಕ್ರಮಗಳಿಗೆ ರಚಿಸುವ ಶಾಸನಬದ್ಧ ಅಂಗಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡುವ ಪರಿಹಾರ ಧನಗಳು ಸೇರುತ್ತವೆ.

ಆ) ಮೇಲಿನ ಸಾಮಾಜಿಕ ಹೊಣೆಗಾರಿಕೆ ನಿರ್ವಹಣೆಗಾಗಿ ಕಂಪನಿಯು ತನ್ನದೇ ಆದ ನೀತಿಯನ್ನು ಹೊಂದಿರುತ್ತದೆ. ಸದರಿ ನೀತಿಯು ಆಡಳಿತ ಮಂಡಳಿಯಿಂದ ಅನುಮೋದನೆಗೊಂಡಿರುತ್ತದೆ. ಕಂಪನಿಗಳ ಕಾಯಿದೆ 2013ರ ಪ್ರಕಾರ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದ ಅಡಿಯಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ.

ಇ) ಕಂಪನಿಯು ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದ ಸಮರ್ಪಕ ನಿರ್ವಹಣೆಗೆ CSR ಸಮಿತಿಯನ್ನು 31–03–2017ರ ಅಂತ್ಯಕ್ಕೆ ಈ ಕೆಳಕಂಡಂತೆ ರಚಿಸಿರುತ್ತದೆ.

| ಕ್ರ.ಸಂ. | CSR ಸಮಿತಿ ಸದಸ್ಯರುಗಳು | ಪದನಾಮ |
|---|---|---|
| 1 | ಶ್ರೀ ಆರ್.ವಿ. ದೇಶಪಾಂಡೆ | ಅಧ್ಯಕ್ಷರು |
| 2 | ಶ್ರೀ ಎಲ್. ರಾಜೇಶ್ವರಿ | ಸದಸ್ಯರು |
| 3 | ಶ್ರೀ ಎಂ. ವಿ. ಹೇಮಂತ್ ಕುಮಾರ್ | ಸದಸ್ಯರು |

(ಈ). ಈ ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭ

ಕಂಪನಿಗಳ ಕಾಯಿದೆ 2013ರ ಪ್ರಕಾರ CSR ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭ ರೂ. 10,84,08,341/– ಆಗಿರುತ್ತದೆ.

| **ವಿಷಯ** | **ಮೊತ್ತ (ರೂ.)** |
|---|---|
| ತೆರಿಗೆ ಮುಂಚಿನ ಲಾಭ (2013–14) | 13,34,38,526.00 |
| ತೆರಿಗೆ ಮುಂಚಿನ ಲಾಭ (2014–15) | 6,65,50,563.00 |
| ತೆರಿಗೆ ಮುಂಚಿನ ಲಾಭ (2015–16) | 12,52,35,935.00 |
| **ಒಟ್ಟು ರೂ.** | **32,52,25,024.00** |
| ಸರಾಸರಿ ಲಾಭ (ಕಳೆದ ಮೂರು ವರ್ಷಗಳಿಂದ) | **10,84,08,341.00** |
| CSR ಬಜೆಟ್ (2016–17ನೇ ಸಾಲಿಗೆ) | **21,68,167.00** |

ಉ) 2016–17ನೇ ಸಾಲಿನಲ್ಲಿ ಕೈಗೊಂಡ CSR ಕಾರ್ಯಕ್ರಮಗಳು

| ಕ್ರ.ಸಂ. | ವಿವರಗಳು | ಮೊತ್ತ (ರೂ.) | ಚಟುವಟಿಕೆಗಳು |
|---|---|---|---|
| 1 | ಅಕ್ಷಯ ಪಾತ್ರ ಫೌಂಡೇಷನ್ ಮೈಸೂರು | 10,00,000.00 | ಬಡ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಗಾಗಿ |
| 2 | ಸರ್ಕಾರಿ ಪ್ರೌಢಶಾಲೆ ಕೈಲಾಶ್‌ಪುರಂ, ಮೈಸೂರು | 1,00,000.00 | ಶೈಕ್ಷಣಿಕ ಶ್ರೇಯೋಭಿವೃದ್ಧಿ |
| 3 | ಸರ್ಕಾರಿ ಪ್ರೌಢಶಾಲೆ, ವ್ಯಾಸರಾಜಪುರ ಟಿ. ನರಸೀಪುರ ತಾ|| | 40,000.00 | ಶೈಕ್ಷಣಿಕ ಶ್ರೇಯೋಭಿವೃದ್ಧಿ |
| 4 | ಸರ್ಕಾರಿ ಪ್ರೌಢಶಾಲೆ, ಸಾಗಡೆ ಗ್ರಾಮ ಚಾಮರಾಜನಗರ ಜಿಲ್ಲೆ | 50,000.00 | ಶೈಕ್ಷಣಿಕ ಶ್ರೇಯೋಭಿವೃದ್ಧಿ |
| 5 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆರೆಹಳ್ಳಿ, ಚಾಮರಾಜನಗರ ಜಿಲ್ಲೆ | 75,000.00 | ಶೈಕ್ಷಣಿಕ ಶ್ರೇಯೋಭಿವೃದ್ಧಿ |
| 6 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ | 17,50,000.00 | ಹಳಿಯಾಳ ಮತ್ತು ಜೊಯಿಡಾ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ ಶೈಕ್ಷಣಿಕ ಆಟೋಪಕರಣಗಳಿಗೆ (ತಲಾ 12,500 ರೂ.ಗಳಂತೆ ಒಟ್ಟು 140 ಅಂಗನವಾಡಿ ಕೇಂದ್ರಗಳಿಗೆ) ನೀಡಲಾಗಿದೆ. |
| | **ಒಟ್ಟು ಮೊತ್ತ** | **30,15,000.00** | |

**17.** ಮೇಲಿನ CSR ಕಾರ್ಯಕ್ರಮಗಳು ಕಂಪನಿಯ CSR ನೀತಿಗೆ ಅನುಗುಣವಾಗಿ ಮಾಡಲಾಗಿದೆ ಎಂದು ತಿಳಿಸಲು ಬಯಸುತ್ತೇವೆ.

**18. ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳ ಸುರಕ್ಷತೆಗಾಗಿ Sexual Harrassment of Women at work place (prevention, prohibition and Redressal) Act , 2013,** ರಡಿಯಲ್ಲಿ 'ಆಂತರಿಕ ದೂರು ಸಮಿತಿ'ಯನ್ನು ರಚಿಸಲಾಗಿರುತ್ತದೆ. 2016–17ನೇ ಸಾಲಿನಲ್ಲಿ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

**19. ಮಾನವ ಸಂಪನ್ಮೂಲ ಮತ್ತು ಕೈಗಾರಿಕಾ ಬಾಂಧವ್ಯ :**

2016–17ನೇ ಸಾಲಿನಲ್ಲಿ ಕಂಪನಿಯ ಆಡಳಿತ ವರ್ಗ ಮತ್ತು ನೌಕರರ ನಡುವೆ ಸೌಹಾರ್ದಯುತ ಬಾಂಧವ್ಯವನ್ನು ಹೊಂದಲಾಗಿರುತ್ತದೆ.

**20. ವಾರ್ಷಿಕ ಪ್ರಮಾಣ ಪತ್ರ :**

2013ರ ಕಂಪನಿ ಕಾಯಿದೆ, ಕಾಲಂ 134 (3) (ಎ) ಪ್ರಕಾರ ಸಲ್ಲಿಸಬೇಕಾದ ವಾರ್ಷಿಕ ಪ್ರಮಾಣ ಪತ್ರವನ್ನು ಈ ವರದಿಗೆ ಅನುಬಂಧಿಸಿ ನೀಡಲಾಗಿದೆ. (**MGT-9).**

**21. ಕಂಪನಿಯ ಷೇರುಗಳ ಡಿಲಿಸ್ಟಿಂಗ್ ಬಗ್ಗೆ :**

ಎಲ್ಲಾ ಷೇರು ವರ್ಗಾವಣೆ ಮತ್ತು ದಾಖಲಾತಿ ಪುಸ್ತಕಗಳ ನಿರ್ವಹಣೆಯನ್ನು ಕಂಪನಿಯ ನೊಂದಾಯಿತ ಕಚೇರಿಯಲ್ಲಿ ನಿರ್ವಹಿಸಲಾಗುತ್ತಿದೆ.

ಶ್ರೀ ಸಿ. ಹರಕುಮಾರ್, ಇವರನ್ನು ಪ್ರಭಾರ ಕಂಪನಿ ಕಾರ್ಯದರ್ಶಿ ಎಂದು ನಿಯುಕ್ತಿಗೊಳಿಸಲಾಗಿದ್ದು ಇವರು ಕಂಪನಿಯ ಪಾಲನಾ ಅಧಿಕಾರಿಯಾಗಿರುತ್ತಾರೆ.

86,155 ಈಕ್ವಿಟಿ ಷೇರುಗಳು ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಲಿಸ್ಟಿಂಗ್ ಆಗಿದ್ದು, ಹಾಲಿ ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್ ಸ್ವಯಂಪ್ರೇರಿತವಾಗಿ ಮುಚ್ಚಿರುವುದರಿಂದ ಅಲ್ಲಿ ಲಿಸ್ಟಿಂಗ್ ಆಗಿದ್ದ 86,155 ಈಕ್ವಿಟಿ ಷೇರುಗಳನ್ನು ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನ ಡಿಸೆಮಿನೇಷನ್ ಬೋರ್ಡ್‌ನಲ್ಲಿ ಇರಿಸಲಾಗಿದೆ. ಕಂಪನಿಗಳ ಕಾಯಿದೆ 2013ರ ಪ್ರಕಾರ ಮತ್ತು ಸಂಬಂಧಿಸಿದ ನಿಯಮಗಳ ಪ್ರಕಾರ ಕಂಪನಿಯು ಲಿಸ್ಟಿಂಗ್ ಮಾನ್ಯತೆಯನ್ನು ಕಳೆದುಕೊಂಡಿರುತ್ತದೆ. ಸದ್ಯಕ್ಕೆ ಕಂಪನಿಯು ಬೇರೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸದರಿ ಷೇರುಗಳನ್ನು ಲಿಸ್ಟಿಂಗ್ ಮಾಡಿಸಲು ಇಚ್ಛಿಸಿಲ್ಲವಾದ್ದರಿಂದ ಮಂಡಳಿಯು ಈಗಾಗಲೇ ಷೇರುದಾರರಿಗೆ Exit ಅವಕಾಶವನ್ನು ಕಲ್ಪಿಸಲಾಗಿದೆ. ಮುಂದುವರೆದು ಕಂಪನಿಯ ಷೇರುಗಳ ಮೌಲ್ಯಮಾಪನ ಮಾಡಿಸಲು ಸೆಬಿಯವರು ನೀಡಿರುವ ಮೌಲ್ಯಮಾಪಕರ ಪೈಕಿ ಒಬ್ಬರನ್ನು ಈ ಕಾರ್ಯಕ್ಕೆ ನಿಯೋಜನೆ ಮಾಡಲು ಈಗಾಗಲೇ ಕ್ರಮ ವಹಿಸಲಾಗಿದೆ.

**22. ಸ್ಥಿರ ಠೇವಣಿಗಳು :**

ಪ್ರಸ್ತುತ ಸಾಲಿನಲ್ಲಿ ಕಂಪನಿಯು ಯಾವುದೇ ಠೇವಣಿಗಳನ್ನು ಕಂಪನಿಗಳ ಕಾಯಿದೆ 2013ರ ಅಡಿಯಲ್ಲಿ ಬರುವ Deposits ವ್ಯಾಖ್ಯಾನದ ಪ್ರಕಾರ ಸ್ವೀಕರಿಸಿರುವುದಿಲ್ಲ.

**23. ಮಾಹಿತಿ ಹಕ್ಕು ಅಧಿನಿಯಮ–2005ರ ಅನುಷ್ಠಾನದ ಬಗ್ಗೆ**

| 2016–17ನೇ ಸಾಲಿನಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳು | ವಿಲೇವಾರಿ ಮಾಡಲಾಗಿರುವ ಒಟ್ಟು ಅರ್ಜಿಗಳು | ಎಷ್ಟು ಅರ್ಜಿಗಳಿಗೆ ಮಾಹಿತಿಯನ್ನು ನಿರಾಕರಿಸಲಾಗಿದೆ |
|---|---|---|
| 07 | 07 | ಇಲ್ಲ |

**24. ಲೆಕ್ಕ ಪರಿಶೋಧಕರು :**

**ಅ) ಶಾಸನಬದ್ಧ ಲೆಕ್ಕಪರಿಶೋಧಕರು :**

ಕಂಪನಿಗಳ ಕಾಯ್ದೆ 2013 ರ ಪರಿಚ್ಛೇದ 139ರ ಪ್ರಕಾರ ಮೆ: ಕಿಚ್ಚ ಅಂಡ್ ಪ್ರಭುಕೇಶವನ್, ಚಾರ್ಟರ್ಡ್ ಅಕೌಂಟೆಂಟ್ಸ್, ಚನ್ನೈ, ಇವರು 2016–17ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ನೇಮಕಗೊಂಡಿರುತ್ತಾರೆ.

ಶಾಸನಬದ್ಧ ಲೆಕ್ಕಪರಿಶೋಧಕರ ಟೀಕೆ:ಟಿಪ್ಪಣಿ/ಅಭಿಪ್ರಾಯಗಳನ್ನು ಗಮನಿಸಲಾಗಿದೆ ಹಾಗೂ ಉತ್ತರಗಳನ್ನು ಈ ವರದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಲಾಗಿದೆ.

ಕಂಪನಿಗಳ ಕಾಯ್ದೆ 2013ರ ಪ್ರಕಾರ ಲೆಕ್ಕ ಪರಿಶೋಧಕರಿಗೆ ನೀಡಬೇಕಾದ ಸಂಭಾವನೆಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿಗದಿಪಡಿಸಬೇಕಾಗಿರುತ್ತದೆ ಹಾಗೂ ಇದಕ್ಕೆ ಸದಸ್ಯರುಗಳ ಸಮ್ಮತಿಯನ್ನು ಕೋರಲಾಗಿದೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (6)(ಬಿ)ರ ಪ್ರಕಾರ 31ನೇ ಮಾರ್ಚ್, 2017 ಕ್ಕೆ ಅಂತ್ಯಗೊಂಡ ವರ್ಷದ ಕಂಪನಿಯ ಲೆಕ್ಕಪತ್ರಗಳ ಮೇಲೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರವರ ವರದಿ/ಟೀಕೆ ಟಿಪ್ಪಣಿಗಳನ್ನು ಈ ವರದಿಗೆ ಲಗತ್ತಿಸಲಾಗಿದೆ.

ಆ) **ಆಂತರಿಕ ಲೆಕ್ಕಪರಿಶೋಧಕರು :**

2016–17ನೇ ಸಾಲಿಗೆ ಮೆ|| ಪಿ.ಎಸ್. ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರನ್ನು ಕಂಪನಿಯ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

ಇ) **ಕಾಸ್ಟ್ ಆಡಿಟರ್ಸ್ :** ಮೆ|| ಆರ್. ಪುರುಷೋತ್ತಮನ್ ರವರನ್ನು ಆರ್ಥಿಕ ವರ್ಷ 2016–17ಕ್ಕೆ ಕಾಸ್ಟ್ ಅಕೌಂಟೆಂಟರಾಗಿ ನೇಮಕ ಮಾಡಲಾಗಿದೆ.

**25. ಇತರೇ ವಿಷಯಗಳು :**

ಅ) **ಸಾಮಾನ್ಯ ಸಭೆಗಳು :** ಹಿಂದಿನ ಮೂರು ವರ್ಷಗಳಲ್ಲಿ ನಡೆದ ವಾರ್ಷಿಕ ಸಾಮಾನ್ಯ ಸಭೆಗಳ ಸ್ಥಳ, ದಿನಾಂಕ ಮತ್ತು ಸಮಯ ಹಾಗೂ ಅಲ್ಲಿ ಅಂಗೀಕಾರವಾದ ವಿಶೇಷ ನಡವಳಿಗಳ ವಿವರಗಳು ಈ ಕೆಳಗಿನಂತಿವೆ:

| **ವರ್ಷ** | **ಸ್ಥಳ** | **ದಿನಾಂಕ ಮತ್ತು ಸಮಯ** | **ಅಂಗೀಕಾರವಾದ ವಿಶೇಷ ನಡವಳಿ** |
|---|---|---|---|
| 2013–14 | ನೊಂದಾಯಿತ ಕಚೇರಿ | 27.09.2014 (ಮ.3.30 ಘಂ) | ವಿಶೇಷ ನಡವಳಿ ಅಂಗೀಕಾರವಾಗಿಲ್ಲ |
| 2014–15 | ನೊಂದಾಯಿತ ಕಚೇರಿ | 28.09.2015 (ಮ.3.30 ಘಂ) | ವಿಶೇಷ ನಡವಳಿ ಅಂಗೀಕಾರವಾಗಿಲ್ಲ |
| 2015–16 | ನೊಂದಾಯಿತ ಕಚೇರಿ | 27.09.2016 (ಮ.3.30 ಘಂ) | ವಿಶೇಷ ನಡವಳಿ ಅಂಗೀಕಾರವಾಗಿಲ್ಲ |

ಕಂಪನಿಯು ಹಿಂದಿನ ಮೂರು ವರ್ಷಗಳಲ್ಲಿ ಯಾವುದೇ ಅಸಾಧಾರಣ ಸಾಮಾನ್ಯ ಸಭೆಗಳನ್ನು ನಡೆಸಿರುವುದಿಲ್ಲ.

ಆ) **ಸಾಮಾನ್ಯ ಷೇರುದಾರರ ಮಾಹಿತಿ :**

(i) 71ನೇ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ, ಸಮಯ ಮತ್ತು
ಸ್ಥಳ : 26ನೇ ಸೆಪ್ಟಂಬರ್ 2017, 3.30ಕ್ಕೆ ಕಂಪನಿಯ ನೊಂದಾಯಿತ ಕಛೇರಿಯಲ್ಲಿ

(ii) ಹಣಕಾಸು ದಿನಾಂಕ ಪಟ್ಟಿ : 01.04.2016 ರಿಂದ 31.03.2017

ಇ) **ಪುಸ್ತಕಗಳು ಮುಚ್ಚಲ್ಪಡುವ ದಿನಾಂಕ :** 71ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಕಂಪನಿಯ ಸದಸ್ಯರ ದಾಖಲಾತಿ ಪುಸ್ತಕ ಮತ್ತು ಷೇರು ವರ್ಗಾವಣೆ ಪುಸ್ತಕಗಳು ದಿನಾಂಕ 17–09–2017 ರಿಂದ 26–09–2017ರ ವರೆಗೆ ಮುಚ್ಚಲ್ಪಡುತ್ತವೆ.

**ಈ) ಲಾಭಾಂಶ ಪಾವತಿಸುವ ದಿನಾಂಕ :**

ಮಂಡಳಿಯು ಲಾಭಾಂಶ ಪಾವತಿಗೆ ಶಿಫಾರಸ್ಸು ಮಾಡಿದ ಪ್ರಕಾರ ದಿನಾಂಕ 26-09-2017 ರಂದು 70ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆ ದೊರೆತಲ್ಲಿ, ದಿನಾಂಕ 26-10-2017 ರಂದು ಪಾವತಿಸಲಾಗುವುದು.

26. ಸಂಪೂರ್ಣ ಸಹಕಾರ ಮತ್ತು ನೆರವು ನೀಡಿರುವ ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರಿಗೆ ನಿಮ್ಮ ನಿರ್ದೇಶಕರುಗಳು ಕೃತಜ್ಞತೆಯನ್ನು ಸಲ್ಲಿಸುತ್ತಾ ದಾಖಲಿಸಲು ಇಚ್ಛಿಸುತ್ತಾರೆ. ನಿಮ್ಮ ನಿರ್ದೇಶಕರುಗಳು, ಉದ್ಯೋಗಿಗಳ ಪ್ರಸಕ್ತ ವರ್ಷದ ಪ್ರಾಮಾಣಿಕ ಸೇವೆಯನ್ನು ಸಹ ಶ್ಲಾಘಿಸಿ, ದಾಖಲಿಸಲು ಇಚ್ಛಿಸುತ್ತಾರೆ.

ಸ್ಥಳ : ಮೈಸೂರು

ದಿನಾಂಕ : 30-08-2017

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ

ಸಹಿ/-

**(ಹೆಚ್.ಎ. ವೆಂಕಟೇಶ್)**

**ಅಧ್ಯಕ್ಷರು**

# ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್, ಮೈಸೂರು–15

31–03–2017 ರ ಅವಧಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ಪರಿಶೀಲನಾ ವರದಿ ಮೇಲೆ ಆಡಳಿತ ಮಂಡಳಿ ಸದಸ್ಯರ ವರದಿ

| | |
|---|---|
| 1. **ಕಂಪನಿಯ ಸ್ವೀಕೃತಿ ಬಗ್ಗೆ** | ಕಂಪನಿಯ ಸ್ವೀಕೃತಿ ಪೈಕಿ ರೂ.41.38ಲಕ್ಷ ಮೂರು ವರ್ಷಗಳಿಗೂ ಮೇಲ್ಪಟ್ಟಿರುವುದರಲ್ಲಿ ರೂ.14.02 ಲಕ್ಷಗಳಿಗೆ ಕಂಪನಿಯು ಕೋರ್ಟ್‌ನಲ್ಲಿ ದಾವೆ ಹೂಡಿ ಡಿಕ್ರಿ ಪಡೆಯಲಾಗಿದ್ದು ವಸೂಲಾತಿಗೆ ಕ್ರಮ ವಹಿಸಲಾಗುವುದು. ರೂ.10.40 ಲಕ್ಷ ಎನ್.ಜಿ.ಇ.ಎಫ್ ಕಾರ್ಖಾನೆಯಿಂದ, ರೂ.6.40 ಲಕ್ಷ ಸರ್ಕಾರಿ ಇಲಾಖೆ ಗಳಿಂದ, ರೂ.5.13 ಲಕ್ಷ ಸಕ್ಕರೆ ಕಾರ್ಖಾನೆಗಳಿಂದ ಮತ್ತು ರೂ.5.43 ಲಕ್ಷ ಇತರೇ ಮೂಲಗಳಿಂದ ಬರಬೇಕಾಗಿದ್ದು ವಸೂಲಾತಿಗೆ / ಹವಣಿಕೆಗೆ ಕ್ರಮ ವಹಿಸಲಾಗುವುದು. |
| 2. **ಕಂಪನಿಯ ಮುಂಗಡ ಪಾವತಿ ಬಗ್ಗೆ** | ಕಂಪನಿಯಿಂದ ಮುಂಗಡ ಪಾವತಿ ರೂ.11,71,127– ಮೆ॥ ಬಿ.ಪಿ.ಸಿ.ಎಲ್‌ಗೆ ನೀಡಿದ್ದ ಮುಂಗಡವಾಗಿದ್ದು ಅದರ ವಸೂಲಾತಿಗೆ ದಾವೆ ಹೂಡಿ ಕಂಪನಿಯ ಪರ ಡಿಕ್ರಿ ಪಡೆಯಲಾಗಿದೆ. ಸದರಿ ಮೊಕದ್ದಮೆಯು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಬಾಕಿ ಇದ್ದು ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| 3. **ರಜೆ ನಗಧೀಕರಣದ ಮೇಲಿನ ಹೊಣೆಗಾರಿಕೆ** | ರಜೆ ನಗದೀಕರಣದ ಮೇಲಿನ ಹೊಣೆಗಾರಿಕೆಯನ್ನು ವಿಮಾಗಣಿತದ ಮೌಲ್ಯ ಮಾಪನದ ಊಹೆಯ ಆಧಾರದ ಮೇಲೆ ಕಳೆದ ಬಾರಿ ಭಾರತೀಯ ಲೆಕ್ಕ ಪರಿಶೋಧಕರು ಲೆಕ್ಕಪರಿಶೋಧನೆಯ ಅವಧಿಯಲ್ಲಿ ನೀಡಲಾಗಿದ್ದ ಆಕ್ಷೇಪಣೆಯ ಅನ್ವಯ ಮಾಡಲಾಗಿದ್ದು AS 15 ಅನ್ನು ವಿಮಾಗಣಿತದ ಮೌಲ್ಯ ಮಾಪನದಂತೆ ಅನುಸರಿಸಲು ಕ್ರಮಕೈಗೊಳ್ಳಲಾಗುವುದು |
| 4. **ಸ್ಥಿರ ಆಸ್ತಿಗಳ ಬಗ್ಗೆ** | ಸ್ಥಿರ ಆಸ್ತಿಗಳ ಸಂರಕ್ಷಣೆಗಾಗಿ ಅದರ ಭೌತಿಕ ಇರುವಿಕೆ ಬಗ್ಗೆ ಪರಿಶೀಲಿಸಿ ವರದಿ ನೀಡಲು ಕಂಪನಿಯ ಆಂತರಿಕ ಲೆಕ್ಕಪರಿಶೋಧಕರಿಗೆ ವಹಿಸಲಾಗಿತ್ತು. ಅದರಂತೆ ಅವರು ಭೌತಿಕ ಪರಿಶೀಲನಾ ವರದಿ ನೀಡಿರುತ್ತಾರೆ. 'Impairment Loss of Fixed Assets' ಬಗ್ಗೆ ಮುಂದಿನ ವರ್ಷಗಳಲ್ಲಿ ಮೌಲ್ಯಮಾಪನ ಮಾಡಿಸಲು ಕ್ರಮ ವಹಿಸಲಾಗುವುದು. |
| 5. **ಸವಕಳಿ** | ಪ್ರೊ–ರೇಟಾ ಆಧಾರದ ಬದಲು ಒಂದು ವರ್ಷದ ಪೂರ್ತಿ ಅವಧಿಗೆ ಕಂಪನಿಯು ಲೆಕ್ಕ ಪತ್ರಗಳ ನಿಯಮದ ಪ್ರಕಾರ ಸವಕಳಿಯನ್ನು ಮಾಡಲಾಗಿದೆ. |

ಆಡಳಿತ ಮಂಡಳಿ ಪರವಾಗಿ
ಸಹಿ/–
**(ಹೆಚ್.ಎ. ವೆಂಕಟೇಶ್)**
ಅಧ್ಯಕ್ಷರು

ಸ್ಥಳ: ಮೈಸೂರು
ದಿನಾಂಕ: 30–08–2017

ಕಿಚ್ಚ ಅಂಡ್ ಪ್ರಭು ಕೇಶವನ್
ಚಾರ್ಟಡ್ ಅಕೌಂಟೆಂಟ್ಸ್

6-ಎಫ್ ಎಫ್, ಮೊದಲನೇ ಮಹಡಿ (ಗೋಲ್ಡನ್ ಎನ್ ಕ್ಲೇವ್ – 184,
ಪೊನ್ನಾಮಲಿ ಐ ರಸ್ತೆ, ಅಪೋಸಿಟ್, ಟೈಲರ್ಸ್ ರಸ್ತೆ ಸಿಗ್ನಲ್, ಚನ್ನೈ, ಇಂಡಿಯಾ
ದೂರವಾಣಿ : 91 - 44 - 26611252, 32944257, 25298803
e-mail: kpkchennai@yahoo.co.in
web : www.kpkca.com

# ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

## ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ ಸದಸ್ಯರಿಗೆ ಲೆಕ್ಕಪರಿಶೋಧಕರ ವರದಿ.

### ಹಣಕಾಸು ಲೆಕ್ಕಪಟ್ಟಿಗಳ ಬಗ್ಗೆ ವರದಿ

ಮೈಸೂರ್ ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ ("ಕಂಪನಿ") ಹಣಕಾಸು ಲೆಕ್ಕಪಟ್ಟಿಗಳನ್ನು ನಾವು ಲೆಕ್ಕಪರಿಶೋಧನೆಗೆ ಒಳಪಡಿಸಿದ್ದು ಅವುಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಇದು 31ನೇ ಮಾರ್ಚ್, 2017ಕ್ಕೆ ಕೊನೆಗೊಂಡಂತೆ ಕಂಪನಿಯ ಲೇಣಿದೇಣಿ ಪಟ್ಟಿ, ಲಾಭ, ನಷ್ಟ ಮತ್ತು ನಗದು ಹರಿವಿನ ವರದಿಗಳನ್ನು ಮತ್ತು ಮಹತ್ವದ ಲೆಕ್ಕಪತ್ರ ನಿರ್ವಹಣಾ ನೀತಿಗಳ ಸಾರಾಂಶ ಹಾಗು ಇತರ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಿದೆ.

### ಹಣಕಾಸು ಲೆಕ್ಕಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಯ ನಿಜವಾದ ಮತ್ತು ನ್ಯಾಯೋಚಿತವಾದ ಹಣಕಾಸು ಸ್ಥಿತಿ, ಆರ್ಥಿಕ ಕಾರ್ಯಕ್ಷಮತೆ ಮತ್ತು ಹಣದ ಹರಿವಿನ ಬಗ್ಗೆ ತಯಾರಿಸಲಾಗುವ ಮತ್ತು ಪ್ರಸ್ತುತಪಡಿಸಲಾಗುವ ಹಣಕಾಸು ವರದಿಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134(5)ರಲ್ಲಿ ತಿಳಿಸಲಾಗಿರುವ ವಿಷಯಗಳಿಗನುಗುಣವಾಗಿ ಕಂಪನಿಯ ಆಡಳಿತ ಮಂಡಳಿಯು ಜವಾಬ್ದಾರಿ ಹೊಂದಿರುತ್ತದೆ ಮತ್ತು ಇದು ಕಂಪನಿಗಳ (ಲೆಕ್ಕಪತ್ರ) ನಿಯಮ, 2014ರ ನಿಯಮ 7 ಸೇರಿದಂತೆ ಕಂಪನಿ ಕಾಯ್ದೆಯ 133 ನೇ ಪ್ರಕರಣದಲ್ಲಿ ನಿರ್ಧಿಷ್ಟಪಡಿಸಲಾಗಿರುವ ಲೆಕ್ಕಪತ್ರದ ಮಾನದಂಡಗಳೂ ಸೇರಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಸ್ವೀಕರಿಸಲಾಗಿರುವ ಲೆಕ್ಕಪಟ್ಟಿಗಳ ತತ್ವಗಳ ಪ್ರಕಾರ ಸೂಚಿಸಲಾದ ಲೆಕ್ಕಪರಿಶೋಧನೆಯ ಗುಣಮಟ್ಟಗಳಿಗೆ ಅನುಗುಣವಾಗಿ ಇರುತ್ತದೆ. ಈ ಜವಾಬ್ದಾರಿಯು ಕಾಯ್ದೆಯ ನಿಬಂಧನೆಯಂತೆ ಕಂಪನಿಯ ಆಸ್ತಿಗಳನ್ನು ರಕ್ಷಿಸುವುದು, ಮೋಸ ಮತ್ತು ಇತರ ತಪ್ಪುಗಳನ್ನು ತಡೆಯುವುದು; ಸೂಕ್ತ ಲೆಕ್ಕಪಟ್ಟಿಗಳ ನಿಯಮಗಳ ಆಯ್ಕೆ ಮತ್ತು ಅನ್ವಯ; ತರ್ಕಬದ್ಧ ಮತ್ತು ವಿವೇಕಯುಕ್ತ ನಿರ್ಧಾರ ಮತ್ತು ಅಂದಾಜು ಮಾಡುವುದು; ಮೋಸ ಅಥವಾ ತಪ್ಪಿಲ್ಲದ ನಿಜವಾದ ಮತ್ತು ನ್ಯಾಯೋಚಿತವಾದ ಹಣಕಾಸು ವರದಿಗಳ ತಯಾರಿ ಮತ್ತು ಪ್ರಸ್ತುತಿಗೆ ಸೂಕ್ತವಾಗುವಂತೆ ಲೆಕ್ಕಪಟ್ಟಿಗಳ ಪೂರ್ಣತ್ವ ಮತ್ತು ಪರಿಣಾಮಕಾರಿತ್ವವನ್ನು ಖಾತರಿಪಡಿಸುವ ಸೂಕ್ತವಾದ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಜಾರಿ ಮತ್ತು ನಿರ್ವಹಣೆಯನ್ನೂ ಒಳಗೊಳ್ಳುತ್ತದೆ.

### ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯನ್ನು ಆಧರಿಸಿ ಈ ಲೆಕ್ಕಪಟ್ಟಿಗಳ ಬಗ್ಗೆ ಒಂದು ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

ನಾವು ಕಾಯ್ದೆಯ ನಿಬಂಧನೆಗಳನ್ನು ಮತ್ತು ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಲೆಕ್ಕಪಟ್ಟಿಯ ವರದಿಗೆ ಅನುಸರಿಸಬೇಕಾಗಿರುವ ಲೆಕ್ಕಪರಿಶೋಧನೆಯ ವಿಷಯ ಮತ್ತು ಮಾನದಂಡಗಳನ್ನು ಪರಿಗಣನೆಗೆ ತೆಗೆದುಕೊಂಡಿರುತ್ತೇವೆ. ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಾಯ್ದೆಯ 143(10) ನೇ ಪ್ರಕರಣದಡಿಯಲ್ಲಿ ನಿಗದಿಪಡಿಸಲಾದ ಲೆಕ್ಕಪರಿಶೋಧನಾ ಮಾನದಂಡಗಳಿಗನುಗುಣವಾಗಿ ಮಾಡಿದ್ದೇವೆ. ಈ ಲೆಕ್ಕಪಟ್ಟಿಗಳಲ್ಲಿ ಸರಕುಗಳ ತಪ್ಪು ವರದಿಯಿಂದ ಮುಕ್ತವಾಗಿದೆಯೇ ಎಂಬುದರ ಬಗ್ಗೆ ಸಮಂಜಸವಾದ ಭರವಸೆಯೊಂದಿಗೆ ಲೆಕ್ಕಪರಿಶೋಧನೆಯನ್ನು ಪಡೆಯಲು ನೈತಿಕ ಅಗತ್ಯಗಳಿಗನುಗುಣವಾಗಿ ಯೋಜನೆ ಮಾಡಿ ಅನುಸರಿಸಬೇಕಾಗಿರುವುದರ ಬಗ್ಗೆ ಈ ಮಾನದಂಡಗಳು ಸೂಚಿಸುತ್ತವೆ.

ಲೆಕ್ಕಪಟ್ಟಿಗಳಲ್ಲಿನ ಮೊತ್ತ ಮತ್ತು ಪ್ರಮಾಣಗಳ ಬಗೆಗಿನ ಲೆಕ್ಕಪರಿಶೋಧನಾ ಪುರಾವೆಗಳ ಕಾರ್ಯಕ್ಷಮತಾ ವಿಧಾನಗಳನ್ನು ಪಡೆಯುವುದನ್ನು ಒಂದು ಲೆಕ್ಕಪರಿಶೋಧನೆ ಒಳಗೊಂಡಿರುತ್ತದೆ. ಹೀಗೆ ಆಯ್ದುಕೊಂಡ ವಿಧಾನಗಳು ಲೆಕ್ಕಪರಿಶೋಧಕರ ನಿರ್ಣಯದ ಜೊತೆಗೆ ವಂಚನೆ ಅಥವಾ ದೋಷದಿಂದಾಗಬಹುದಾದ ಲೆಕ್ಕಪಟ್ಟಿಗಳ ಸರಕುಗಳ ತಪ್ಪು ವರದಿಗಳನ್ನೂ ಅವಲಂಬಿಸಿರುತ್ತದೆ. ನಷ್ಟದ ಮೌಲ್ಯಮಾಪನಗಳನ್ನು ಮಾಡುವ ಸಂದರ್ಭಗಳಲ್ಲಿ ಲೆಕ್ಕಪರಿಶೋಧಕರು ಕಂಪನಿ ಸಿದ್ಧಪಡಿಸುವ ಮತ್ತು ಸರಿಯಾಗಿ ಪ್ರಸ್ತುತಪಡಿಸುವ ಲೆಕ್ಕಪಟ್ಟಿಗಳ ಸೂಕ್ತ ಎನಿಸುವ ಆಂತರಿಕ ನಿಯಂತ್ರಣವನ್ನು ಪರಿಗಣಿಸುತ್ತದೆ. ಇದು ಇಂತಹ ಸ್ಥಿತಿಗಳಲ್ಲಿ ಸೂಕ್ತ ಎನಿಸುವ ಲೆಕ್ಕಪರಿಶೋಧನೆ ಕಾರ್ಯವಿಧಾನಗಳನ್ನು ವಿನ್ಯಾಸಿಸಲು ಸಹಾಯಕವಾಗುತ್ತದೆ. ಆದರೆ, ಇದು ಕಂಪನಿ ಹಣಕಾಸು ವರದಿಯ ವ್ಯವಸ್ಥೆಗೆ ಸೂಕ್ತವಾದ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿರುವ ಬಗ್ಗೆ ಅಭಿಪ್ರಾಯವನ್ನು ಹೇಳುವ ಉದ್ದೇಶವನ್ನು ಹೊಂದಿಲ್ಲ. ಒಂದು ಲೆಕ್ಕಪರಿಶೋಧನೆಗೆ ಬಳಸಲಾದ ಲೆಕ್ಕಪತ್ರ ನಿರ್ವಹಣೆ ನೀತಿಗಳ ಯುಕ್ತತೆಯ ಜೊತೆಗೆ ಆಡಳಿತ ಮಂಡಳಿ ಅಂದಾಜಿಸಿದ ಲೆಕ್ಕಗಳ ನ್ಯಾಯಸಮ್ಮತತೆ ಹಾಗೆಯೇ ಲೆಕ್ಕಪಟ್ಟಿಗಳ ಒಟ್ಟಾರೆ ಮೌಲ್ಯಮಾಪನವನ್ನೂ ಇದು ಒಳಗೊಂಡಿದೆ.

ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಪುರಾವೆ ಒದಗಿಸಲು ನಾವು ಪಡೆದಿರುವ ಲೆಕ್ಕಪರಿಶೋಧನಾ ವಾಸ್ತವಾಂಶಗಳು ಸಾಕಷ್ಟಿವೆ ಹಾಗೂ ಸೂಕ್ತವಾಗಿವೆ.

**ಅರ್ಹ ಅಭಿಪ್ರಾಯದ ಆಧಾರ:**

(ಎ) ಕಂಪನಿಯ ವ್ಯಾಪಾರ ವಹಿವಾಟಿನಿಂದ ಸ್ವೀಕೃತಿ ರೂ. 41,37,615/– (ಹಿಂದಿನ ವರ್ಷ ರೂ. 35,52,257/–) ಆಗಿದ್ದು ಇದು 3 ವರ್ಷಗಳಿಗಿಂತ ಹಿಂದಿನದ್ದಾಗಿದೆ ಮತ್ತು ಮಿತಿಯ ಕಾಯ್ದೆ, 1963ರ ಅಡಿಯಲ್ಲಿ ನಿಗದಿಪಡಿಸಲಾಗಿರುವ ಪುನಪ್ರಾಪ್ತಿ ಅವದಿಗಿಂತಲೂ ಮೀರಿದ್ದು ನಮ್ಮ ಅಭಿಪ್ರಾಯದ ಪ್ರಕಾರ ಅದನ್ನು ಪುನಪ್ರಾಪ್ತಿ ಮಾಡಲಾಗುವುದಿಲ್ಲ. ಆದಾಗ್ಯೂ ಲೆಕ್ಕಪತ್ರಗಳಲ್ಲಿ ಸೂಕ್ತ ಮುನ್ನೇರ್ಪಾಡು ಮಾಡಿರುವುದಿಲ್ಲ. ಲಾಭ ಮತ್ತು ವ್ಯಾಪಾರ ವಹಿವಾಟಿನ ಸ್ವೀಕೃತಿಗಳನ್ನು ಇಷ್ಟರಮಟ್ಟಿಗೆ ಹೆಚ್ಚಿಗೆ ನಮೂದಿಸಲಾಗಿದೆ (ಟಿಪ್ಪಣಿ 37(ಎಚ್) ನೋಡಿ). ಈ ವಿಷಯವನ್ನು 31 ಮಾರ್ಚ್ 2016ಕ್ಕೆ ಕೊನೆಗೊಂಡ ನಮ್ಮ ಹಣಕಾಸು ವರದಿಗಳಲ್ಲಿಯೂ ಉಲ್ಲೇಖಿಸಲಾಗಿದೆ.

(ಬಿ) ಕಂಪನಿಯ ಮುಂಗಡಗಳು ರೂ. 11,71,127/– (ಕಳೆದ ವರ್ಷ ರೂ. 11,71,127/–) ಆಗಿದ್ದು ಅದು 3 ವರ್ಷಗಳಿಗಿಂತ ಹೆಚ್ಚಿನ ಅವದಿಗೆ ಬಾಕಿಯಿರುತ್ತದೆ. ಕಂಪನಿ ಪುನಪ್ರಾಪ್ತಿ ದಾವೆಯನ್ನು ಹೂಡಿರುತ್ತದೆ. ಆದರೆ ನಮ್ಮ ಅಭಿಪ್ರಾಯದ ಪ್ರಕಾರ ಅದನ್ನು ಪುನಪ್ರಾಪ್ತಿ ಮಾಡಲಾಗುವುದಿಲ್ಲ ಹಾಗಾಗಿ ಲೆಕ್ಕಪತ್ರಗಳಲ್ಲಿ ಅದಕ್ಕೆ ಸೂಕ್ತ ಮುನ್ನೇರ್ಪಾಡು ಮಾಡಬೇಕಾಗಿದೆ. ಲಾಭಗಳು ಮತ್ತು ವ್ಯಾಪಾರ ಸ್ವೀಕೃತಿಗಳನ್ನು ಇಷ್ಟರಮಟ್ಟಿಗೆ ಹೆಚ್ಚಿಗೆ ನಮೂದಿಸಲಾಗಿದೆ (ಟಿಪ್ಪಣಿ 37(ಐ) ನೋಡಿ). ಈ ವಿಷಯವನ್ನು 31 ಮಾರ್ಚ್ 2016ಕ್ಕೆ ಕೊನೆಗೊಂಡ ನಮ್ಮ ಹಣಕಾಸು ವರದಿಗಳಲ್ಲಿಯೂ ಉಲ್ಲೇಖಿಸಲಾಗಿದೆ.

(ಸಿ) ಎ.ಎಸ್. 15 ರ ಅಡಿಯಲ್ಲಿ ಆಕ್ಚುರಿಯಲ್ ಮೌಲ್ಯಮಾಪನ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳ ಪ್ರಕಾರ ರಜೆ ನಗದೀಕರಣದ ಹೊಣೆಗಾರಿಕೆಯನ್ನು ನಿರ್ಧರಿಸಲಾಗಿಲ್ಲ. ಹಾಗಾಗಿ ಆಕ್ಚುರಿಯಲ್ ಮೌಲ್ಯಮಾಪನದ ಗೈರಿನಲ್ಲಿ ಪ್ರಸಕ್ತ ಸಾಲಿನ ಹಣಕಾಸಿನ ವರದಿಯ ಮೇಲೆ ಅದರ ಪರಿಣಾಮವನ್ನು ನಮಗೆ ಪ್ರಮಾಣೀಕರಿಸಲಾಗುತ್ತಿಲ್ಲ. (ಟಿಪ್ಪಣಿ 2.1(ಕೆ) ನೋಡಿ). ಈ ವಿಷಯವನ್ನು 31 ಮಾರ್ಚ್ 2016ಕ್ಕೆ ಕೊನೆಗೊಂಡ ನಮ್ಮ ಹಣಕಾಸು ವರದಿಗಳಲ್ಲಿಯೂ ಉಲ್ಲೇಖಿಸಲಾಗಿದೆ.

(ಡಿ) ಕಂಪನಿಯು ತನ್ನ ಸ್ಥಿರಾಸ್ತಿಗಳ ಮುಂದುವರೆದ ಮೊತ್ತವನ್ನು ಪರಿಶೀಲಿಸಿಲ್ಲ ಮತ್ತು ಎ.ಎಸ್–28 ರ ದುರ್ಬಲಗೊಳ್ಳುವಿಕೆಯ ನಷ್ಟ ಇದರಡಿಯಲ್ಲಿ ಉಂಟಾಗಬಹುದಾದ ದುರ್ಬಲಗೊಳ್ಳುವಿಕೆಯ ನಷ್ಟವನ್ನು, ಯಾವುದಾದರೂ ಇದ್ದಲ್ಲಿ, ಗುರುತಿಸಲಾಗಿಲ್ಲ. ಆದರೂ, ಈ ರೀತಿಯ ನಷ್ಟಗಳ ಗುರುತಿಸುವಿಕೆಯ ಬಾಕಿ ಕೆಲಸವನ್ನು ನಾವು ಮಾಡಲು ಸಾಧ್ಯವಾಗಿಲ್ಲ ಹಾಗಾಗಿ ಹಣಕಾಸು ವರದಿಯ ಮೇಲೆ ಇದರ ಪರಿಣಾಮವನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. (ಟಿಪ್ಪಣಿ 36 ನ್ನು ನೋಡಿ) ಈ ವಿಷಯವನ್ನು 31 ಮಾರ್ಚ್ 2016ಕ್ಕೆ ಕೊನೆಗೊಂಡ ನಮ್ಮ ಹಣಕಾಸು ವರದಿಗಳಲ್ಲಿಯೂ ಉಲ್ಲೇಖಿಸಲಾಗಿದೆ.

ಇ) ಪ್ರಸಕ್ತ ವರ್ಷದಲ್ಲಿ ಖರೀದಿಸಿರುವ ಸ್ಥಿರಾಸ್ತಿಗಳ ಮೇಲೆ ಸವಕಳಿಯನ್ನು ಪೂರ್ಣ ಅವಧಿಗೆ ತೆಗೆದು ಕೊಂಡಿರುವುದರಿಂದ ರೂ. 41,015/– ಗಳಷ್ಟು ಲಾಭ–ನಷ್ಟದ ಖಾತೆಯಲ್ಲಿ ಕಡಿಮೆ ಲಾಭ ಮತ್ತು ಸ್ಥಿರ ಆಸ್ತಿಗಳ ಮೌಲ್ಯವನ್ನು ಕಡಿಮೆ ತೋರಿಸಲಾಗಿದೆ.

**ಅರ್ಹ ಅಭಿಪ್ರಾಯ**

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತ ಮಾಹಿತಿ ಮತ್ತು ನಮಗೆ ನೀಡಿದ ವಿವರಣೆಗಳ ಪ್ರಕಾರ, ಅರ್ಹ ಅಭಿಪ್ರಾಯದ ಆಧಾರ ಖಂಡಿಕೆಯ ವಿಷಯಗಳಲ್ಲಿ ವಿವರಿಸಲಾಗಿರುವ ವಿಷಯಗಳ ಪರಿಣಾಮವನ್ನು ಹೊರತುಪಡಿಸಿ, ಮೇಲೆ ಹೇಳಲಾದ ವರದಿಗಳು ಕಾಯ್ದೆಯಲ್ಲಿ ಸೂಚಿಸಿರುವಂತೆ ಮಾರ್ಚ್ 31, 2017 ಕ್ಕೆ ಕೊನೆಗೊಂಡಂತೆ ಕಂಪನಿಯ ವ್ಯವಹಾರ, ಲಾಭ ಮತ್ತು ಹಣದ ಹರಿವಿಗೆ ಸಂಬಂಧಿಸಿದ ಲೆಕ್ಕಪಟ್ಟಿಗಳನ್ನು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಂಡ ಲೆಕ್ಕಗಾರಿಕೆಯ ತತ್ವಗಳು ಅನುಸರಣೆಯಲ್ಲಿರುವಂತೆ ನಿಜವಾದ ಮತ್ತು ನ್ಯಾಯೋಚಿತವಾಗಿ ಮಾಹಿತಿಯನ್ನು ನೀಡುತ್ತವೆ.

**ಇತರೆ ಕಾನೂನಾತ್ಮಕ ಮತ್ತು ನಿಯಂತ್ರಿತ ಅಗತ್ಯತೆಗಳ ವರದಿ**

1. ಭಾರತೀಯ ಕೇಂದ್ರ ಸರ್ಕಾರ ಹೊರಡಿಸಿದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ 2016ರ ಅಡಿಯಲ್ಲಿ ಪ್ರಕರಣ 143 ಉಪಪ್ರಕರಣ (11)ರ ಪ್ರಕಾರ ನಮ್ಮ ವರದಿಯ ಕಂಡಿಕೆ 3 ಮತ್ತು 4ರಲ್ಲಿ ಕಂಪನಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಅನ್ವಯವಾಗುವ ಮಟ್ಟಿಗೆ ಅನುಬಂಧದಲ್ಲಿ ನೀಡಲಾಗಿದೆ.

2. ನಮ್ಮ ವರದಿಯಲ್ಲಿ ನೀಡಲಾಗಿರುವ ಅನುಬಂಧಗಳಿಗೆ ಸಂಬಂಧಿಸಿದಂತೆ ಮುಂದುವರೆದ ಟಿಪ್ಪಣಿಗಳು.

ಎ) ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ನಮಗೆ ತಿಳಿದಂತೆ, ನಂಬಬಹುದಾದ ಮಟ್ಟಿಗೆ ನಮಗೆ ಬೇಕಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಕೇಳಿರುತ್ತೇವೆ ಮತ್ತು ಪಡೆದಿರುತ್ತೇವೆ.

ಬಿ) ಮೇಲೆ ತಿಳಿಸಲಾದ 'ಅರ್ಹ ಅಭಿಪ್ರಾಯದ ಆಧಾರ' ಖಂಡಿಕೆಯಲ್ಲಿ ವಿವರಿಸಲಾದ ವಿಷಯದ ಪರಿಣಾಮವನ್ನು ಹೊರತುಪಡಿಸಿದಂತೆ ನಮ್ಮ ಅಭಿಪ್ರಾಯದಲ್ಲಿ ಲೆಕ್ಕಪತ್ರಗಳನ್ನು ಪರಿಶೋಧಿಸಲಾಗಿ, ಕಾನೂನು ಪ್ರಕಾರ ಅಗತ್ಯವೆನಿಸಿದ ಲೆಕ್ಕಪುಸ್ತಕಗಳನ್ನು ಕಂಪನಿಯಲ್ಲಿ ಇಲ್ಲಿಯವರೆಗೆ ಇಡಲಾಗಿದೆ.

ಸಿ) ಈ ವರದಿಗೆ ಲಗತ್ತಿಸಿರುವ ಲೇಣಿದೇಣಿ ಪಟ್ಟಿ, ಲಾಭ ನಷ್ಟದ ಖಾತೆ, ಲೆಕ್ಕ ಪುಸ್ತಕಗಳು, ನಗದು ಹರಿವಿನ ವರದಿ ಹಾಗೂ ಸಲ್ಲಿಕೆಗಳು ಸರಿ ಹೊಂದುತ್ತವೆ.

ಡಿ) ಅರ್ಹ ಅಭಿಪ್ರಾಯದ ಆಧಾರ ಖಂಡಿಕೆಯ ವಿಷಯಗಳಲ್ಲಿ ವಿವರಿಸಲಾಗಿರುವ ವಿಷಯಗಳ ಪರಿಣಾಮವನ್ನು ಹೊರತುಪಡಿಸಿ, ನಮ್ಮ ಅಭಿಪ್ರಾಯದಲ್ಲಿ, ಲೇಣಿದೇಣಿ ಪಟ್ಟಿ, ಲಾಭ ನಷ್ಟದ ಖಾತೆ, ಲೆಕ್ಕ ಪುಸ್ತಕಗಳು, ನಗದು ಹರಿವಿನ ವರದಿಗಳು ಕಂಪನಿಗಳ ಕಾಯ್ದೆ, ಪ್ರಕರಣ (133), ಕಂಪನಿಗಳ (ಲೆಕ್ಕಪತ್ರ) ನಿಯಮ 2014ರ ನಿಯಮ 7 ರಲ್ಲಿ ಸೂಚಿಸಲಾದ ಲೆಕ್ಕಪರಿಶೋಧನೆಯ ಮಾನದಂಡಗಳಿಗೆ ಅನುಗುಣವಾಗಿವೆ.

ಇ) ಮೇಲಿನ ಪ್ಯಾರದಲ್ಲಿ ನಾವು ನೀಡಿರುವ ಅಭಿಪ್ರಾಯಗಳು ಕಂಪನಿಯ ಕಾರ್ಯ ಚಟುವಟಿಕೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಬಲ್ಲದು.

ಎಫ್) ನಿರ್ದೇಶಕರಿಂದ 31ನೇ ಮಾರ್ಚ್, 2017ರಂದು ಪಡೆದ ಲಿಖಿತ ವರದಿ ಆಧಾರದ ಮೇಲೆ ಮತ್ತು ನಿರ್ದೇಶಕ ಮಂಡಳಿಯವರಿಂದ ಪಡೆದ ದಾಖಲೆಯಿಂದಲೂ ಕಂಪನಿಗಳ ಕಾಯ್ದೆ, ಪ್ರಕರಣ 164 (2) ರ ಪ್ರಕಾರ 31ನೇ ಮಾರ್ಚ್, 2017ರಂತೆ ಯಾವುದೇ ನಿರ್ದೇಶಕರನ್ನು ಅನರ್ಹಗೊಳಿಸಲಾಗಿಲ್ಲ.

ಜಿ) ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಇತರೆ ಸಂಬಂಧಿಸಿದ ವಿಷಯಗಳ ಬಗ್ಗೆ ನಮ್ಮ ಅಭಿಪ್ರಾಯ ಮೇಲೆ ನೀಡಿರುವ ಆಡಿಟ್ ವರದಿಯಲ್ಲಿ ತಿಳಿಸಲಾಗಿದೆ.

ಹೆಚ್) ಆಂತರಿಕ ಲೆಕ್ಕಪತ್ರಗಳ ನಿಯಂತ್ರಣ (ಐಎಫ್‌ಸಿ) ಗಳ ಬಗ್ಗೆ ಅನುಬಂಧ 2ರಲ್ಲಿ ಪ್ರತ್ಯೇಕವಾಗಿ ನೀಡಲಾಗಿರುವ ವರದಿಯನ್ನು ಅವಲೋಕಿಸಬಹುದಾಗಿದೆ.

ಐ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮ 2014 ರ ನಿಯಮ 11 ರಂತೆ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಬೇಕಾಗಿರುವ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನಮಗೆ ತಿಳಿದಂತೆ, ನಂಬಬಹುದಾದ ಮಟ್ಟಿಗೆ ನಮಗೆ ಈ ಮಾಹಿತಿ ಮತ್ತು ವಿವರಣೆಗಳನ್ನು ನೀಡಿರುತ್ತಾರೆ:

(i) ಕಂಪನಿಯು ತನ್ನ ಹಣಕಾಸಿನ ವರದಿಗಳಲ್ಲಿ ತನ್ನ ಹಣಕಾಸಿನ ಸ್ಥಿತಿಯಲ್ಲಿ ಬಾಕಿ ಇರುವ ದಾವೆಗಳ ಪರಿಣಾಮವನ್ನು ಬಹಿರಂಗಪಡಿಸಿದೆ– ಈ ಹಣಕಾಸು ವರದಿಗಳೊಂದಿಗೆ ನೀಡಲಾಗಿರುವ ಟಿಪ್ಪಣಿ 37(ಸಿ) ಯನ್ನು ನೋಡಿ.

(ii) ಉತ್ಪನ್ನದ ಒಪ್ಪಂದಗಳೂ ಸೇರಿದಂತೆ ಯಾವುದೇ ದೀರ್ಘಾವಧಿಯ ಒಪ್ಪಂದಗಳನ್ನು ಕಂಪನಿಯು ಹೊಂದಿಲ್ಲ.

(iii) ಕಂಪನಿಯಿಂದ ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತಗಳು ಇರುವುದಿಲ್ಲ.

(iv) ಭಾರತ ಸರ್ಕಾರ, ಹಣಕಾಸು ಸಚಿವಾಲಯದ ನೋಟಿಫಿಕೇಷನ್ ಸಂಖ್ಯೆ ಎಸ್.ಓ. 3407(ಇ) ದಿನಾಂಕ 08–11–2016 ರೀತ್ಯಾ ನವೆಂಬರ್ 8, 2016 ರಿಂದ 30ನೇ ಡಿಸೆಂಬರ್ 2016ರ ಅವಧಿಯೊಳಗೆ ನೀಡಬೇಕಾದ ಹಣಕಾಸಿನ ವ್ಯವಹಾರಗಳು ಮತ್ತು ಹೂಡಿಕೆಗಳ ಬಗ್ಗೆ ನೀಡಿರುವ ವಿವರಗಳು ಸಮರ್ಪಕವಾಗಿರುವತ್ತದೆ (ಪರಿಶೀಲಿಸಿ ಸಂಖ್ಯೆ 37).

3. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(5) ರ ನಿಬಂಧನೆಗೆ ಅನುಸರಣೆಯಾಗುವಂತೆ ಭಾರತದ ಮಹಾಲೇಖಪಾಲರು ಹೊರಡಿಸಿದ ಉಪನಿರ್ದೇಶನಗಳಂತೆ, ನಾವು ಹೀಗೆ ವರದಿಮಾಡುತ್ತೇವೆ,

(i) ಕಂಪನಿಯನ್ನು ಬಂಡವಾಳ ಹಿಂತೆಗೆತಕ್ಕೆ ಆಯ್ಕೆ ಮಾಡಿಲ್ಲ.

(ii) ಸಾಲ ಮನ್ನಾ / ಸಾಲ ವಜಾ ಪ್ರಕರಣಗಳು ಈ ಕೆಳಗಿನಂತಿವೆ

| SI.No. | Party | Amount | Remarks |
|---|---|---|---|
| | **Govt. Parties:** | | |
| 1 | KSRTC, Tumkur | 36,600.00 | Not recoverable as goods were received in damaged conditions & also there was some quality issues. |
| 2 | KSRTC, Hospet | 49,507.00 | Not recoverable as goods were received in damaged conditions & also there was some quality issues. |
| 3 | NEKRTC, Yadgiri | 28,762.00 | Not recoverable as there was some quality issues during supply of goods. |
| 4 | NWKRTC, Bijapur | 6,540.00 | Not recoverable as party reduced the same towards handling & rate difference on consolidated basis. |
| 5 | NWKRTC, RWS, Hubli | 28,874.00 | Not recoverable as goods were received in damaged conditions & also there was some quality issues. |
| | **Total** | **1,50,283.00** | |

(iii) ಸರ್ಕಾರ ಅಥವಾ ಇತರೇ ಮೂಲಗಳಿಂದ ಉಡುಗೊರೆಯಾಗಿ ಸ್ವೀಕರಿಸಲಾಗಿರುವ ಆಸ್ತಿಗಳಿಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ. ಮೂರನೇ ಪಾರ್ಟಿ ಬಳಿ ಯಾವುದೇ ದಾಸ್ತಾನನ್ನು ಇಡಲಾಗಿರುವುದಿಲ್ಲ.

(iv) 3–5 ವರ್ಷಗಳಿಂದ 3 ಕಾನೂನು ಪ್ರಕರಣಗಳು ಬಾಕಿ ಉಳಿದಿವೆ. ಎಲ್ಲಾ ಕಾನೂನು ಪ್ರಕರಣಗಳ ವೆಚ್ಚಗಳ ನಿರ್ವಹಣಾ ವ್ಯವಸ್ಥೆಯು ತೃಪ್ತಿಕರವಾಗಿದೆ ಮತ್ತು ಬಾಕಿ ಇರುವ ಪ್ರಕರಣಗಳು ಹೀಗಿವೆ (ಟಿಪ್ಪಣಿ 37(ಸಿ) ಯನ್ನು ನೋಡಿ):

| ಕ್ರ. ಸಂ. | ದಿನಾಂಕ | ಪ್ರಕರಣದ ವಿವರಗಳು | ಬಾಕಿ ಉಳಿದಿರಲು ಕಾರಣ |
|---|---|---|---|
| 1. | 8–11–2010 | ಮೆ. ಹರಿಕೃಷ್ಣ ಮೆಶೀನ್ ಟೆಕ್ | ಪ್ರತಿವಾದಿ ಉಚ್ಚನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ, ವಿಚಾರಣೆಯ ದಿನಾಂಕ ಇನ್ನೂ ನಿಗದಿಯಾಗಿರುವುದಿಲ್ಲ. |
| 2. | 20–01–2012 | ಮೆ. ವಿಕ್ಟರಿ ಟ್ರಾನ್ಸ್‌ಫಾರ್ಮರ್ | ವಿಕ್ಟರಿ ಟ್ರಾನ್ಸ್‌ಫಾರ್ಮರ್‌ನ್ನು ವಿಸರ್ಜಿಸಲು BIFRಗೆ ಉಲ್ಲೇಖಿಸಲಾಗಿರುವ ನ್ಯಾಯಾಲಯದ ತೀರ್ಪಿಗೆ ಪ್ರತಿಯಾಗಿ ವಾದಿಯು ಆಕ್ಷೇಪಣೆ ಸಲ್ಲಿಸಿರುತ್ತಾರೆ. |
| 3. | 30–12–2012 | ಮೆ. ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. | ಈ ಪ್ರಕರಣದ ತೀರ್ಪು MPVL ಪರ ಆಗಿದ್ದು, BPCL ಮೇಲ್ಮನಿವಿ ಸಲ್ಲಿಸಿರುತ್ತದೆ. |

**ಕಿಚ್ಚ ಅಂಡ್ ಪ್ರಭು ಕೇಶವನ್**
**ಚಾರ್ಟಡ್ ಅಕೌಂಟೆಂಟ್ಸ್ ಪರವಾಗಿ**
**ಎಫ್‌ಆರ್‌ಎನ್: 050108S**
**ಸಹಿ/–**
**ಎ. ಉಷ**
**(ಪಾಲುದಾರರು)**
**(ಸದಸ್ಯತ್ವ ಸಂಖ್ಯೆ: 218313)**

**ಸ್ಥಳ : ಚೆನ್ನೈ**
**ದಿನಾಂಕ : 25–07–2017**

# ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

**(31 ಮಾರ್ಚ್, 2017ಕ್ಕೆ ಕೊನೆಗೊಂಡಂತೆ ಮೈಸೂರ್ ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ನಮ್ಮ ವರದಿಯಲ್ಲಿ ಉಲ್ಲೇಖಿಸಿರುವಂತೆ)**

**1. ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ**

(ಎ) ಕಂಪನಿಯು ತನ್ನ ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳು ಮತ್ತು ಪರಿಸ್ಥಿತಿ ಸೇರಿದಂತೆ ಪೂರ್ಣ ವಿವರಗಳನ್ನು ತೋರಿಸುವ ಸರಿಯಾದ ದಾಖಲೆಗಳನ್ನು ನಿರ್ವಹಿಸಿದೆ.

(ಬಿ) ಈ ಆಸ್ತಿಗಳನ್ನು ಆಡಳಿತ ಮಂಡಳಿಯು ತರ್ಕಬದ್ಧ ಅಂತರಗಳಲ್ಲಿ ಭೌತಿಕವಾಗಿ ಪರಿಶೀಲಿಸಿದೆ. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಆ ರೀತಿಯ ಪರಿಶೀಲನೆಯ ಸಮಯದಲ್ಲಿ ಯಾವುದೇ ಆಸ್ತಿಗಳ ವ್ಯತ್ಯಾಸಗಳನ್ನು ಗಮನಿಸಲಾಗಿಲ್ಲ.

(ಸಿ) ನಮ್ಮ ಅಭಿಪ್ರಾಯದ ಪ್ರಕಾರ ಲೆಕ್ಕಪತ್ರಗಳ ತಪಾಸಣೆ ಸಂದರ್ಭದಲ್ಲಿ ಕಂಪನಿಯು ಒದಗಿಸಿದ ದಾಖಲೆಗಳ ಪ್ರಕಾರ ಆಸ್ತಿ ಕ್ರಯ ಪತ್ರಗಳ ದಾಖಲಾತಿಗಳು ಕಂಪನಿಯ ಹೆಸರಿನಲ್ಲಿ ನೊಂದಾವಣೆಯಾಗಿರುತ್ತವೆ.

**2. ದಾಸ್ತಾನು ಪಟ್ಟಿಗಳಿಗೆ ಸಂಬಂಧಿಸಿದಂತೆ**

ಲೆಕ್ಕ ತಪಾಸಣೆಯ ಸಂದರ್ಭದಲ್ಲಿ ಒದಗಿಸಲಾದ ಮಾಹಿತಿಗಳ ಪ್ರಕಾರ ಕಂಪನಿಯ ಸರಕು/ದಾಸ್ತಾನು ತಪಾಸಣೆಯನ್ನು ವರ್ಷದ ಅಂತ್ಯಕ್ಕೆ ಮಾಡಿರುವುದು ಕಂಡುಬಂದಿದ್ದು, ಭೌತಿಕ ದಾಸ್ತಾನು ಪರಿಶೀಲನಾ ಸಂದರ್ಭದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ.

**3. ಕಂಪನಿಗಳ ಕಾಯ್ದೆ, 2013ರ ಪ್ರಕರಣ 189 ರ ಅಡಿಯಲ್ಲಿ ನಿರ್ವಹಿಸಲಾಗಿರುವ ದಾಖಲೆ ಪುಸ್ತಕದಲ್ಲಿ ಒಳಗೊಂಡ ಪಾರ್ಟಿಗಳಿಗೆ ನೀಡಲಾದ ಸಾಲಗಳಿಗೆ ಸಂಬಂಧಿಸಿದಂತೆ**

ನಮಗೆ ನೀಡಿದ ಮಾಹಿತಿಯ ಪ್ರಕಾರ ಈ ಕಂಪನಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 189ರ ಅಡಿಯಲ್ಲಿ ನಿರ್ವಹಿಸಲಾಗುವ ದಾಖಲೆಯಡಿಯಲ್ಲಿ ಪಟ್ಟಿ ಮಾಡಲಾದ ಯಾವುದೇ ಕಂಪನಿಗಳಿಗಾಗಲಿ, ಉದ್ಯಮಕ್ಕಾಗಲಿ ಸಾಲ ಮಂಜೂರು ಮಾಡಿಲ್ಲ. ಆದುದರಿಂದ, ಆದೇಶದ ಖಂಡಿಕೆ 3(iii) ರ ನಿಬಂಧನೆಗಳು ಈ ಕಂಪನಿಗೆ ಅನ್ವಯಿಸುವುದಿಲ್ಲ.

**4. ಕಂಪನಿಗಳ ಕಾಯಿದೆ 2013 ಕಾಲಂ (185) (186) ರ ಪ್ರಕಾರ ಸಾಲ, ಹೂಡಿಕೆ, ಕಾತರಿ ಮತ್ತು ಭದ್ರತೆಗಳ ಬಗ್ಗೆ**

**ಲೆಕ್ಕ** ತಪಾಸಣೆ ಸಂದರ್ಭದಲ್ಲಿ ಒದಗಿಸಲಾದ ಮಾಹಿತಿಗಳ ಪ್ರಕಾರ ಕಂಪನಿಯು ಯಾವುದೇ ಸಾಲ, ಹೂಡಿಕೆ, ಖಾತರಿ ಮತ್ತು ಭದ್ರತೆಗಳನ್ನು ನೀಡಿರುವುದಿಲ್ಲ. ಆದ್ದರಿಂದ ಪ್ಯಾರ 3(iv) ರ ಅಂಶಗಳು ಕಂಪನಿಗೆ ಅನ್ವಯಿಸುವುದಿಲ್ಲ.

5. ನಾವು ಖಚಿತಪಡಿಸಿಕೊಂಡ ಮಟ್ಟಕ್ಕೆ ಕಂಪನಿಯು ಸಾರ್ವಜನಿಕರಿಂದ ಯಾವುದೇ ರೀತಿಯ ಠೇವಣಿಗಳನ್ನು ಸ್ವೀಕರಿಸಿಲ್ಲ.

6. ಕಂಪನಿಗಳ ಕಾಯಿದೆ 2013ರ ಕಾಲಂ (148) ಪ್ರಕಾರ ಭಾರತ ಸರ್ಕಾರ ನಿಗಧಿಪಡಿಸಿರುವ ನಿಯಮಗಳ ಅನುಸಾರ ಕಂಪನಿಯ ಕಾಸ್ಟ್ ರೆಕಾರ್ಡ್‌ಗಳನ್ನು ಸಮಗ್ರವಾಗಿ ತಪಾಸಣೆ ಮಾಡಿರುತ್ತೇವೆ. ನಮ್ಮ ಅಭಿಪ್ರಾಯದ ಪ್ರಕಾರ ಮೇಲ್ನೋಟಕ್ಕೆ ಕಾಸ್ಟ್ ರೆಕಾರ್ಡ್‌ಗಳನ್ನು ಸಮರ್ಪಕವಾಗಿ ನಿರ್ವಹಿಸಿರುತ್ತಾರೆ.

**7. ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ**

(ಎ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಹಾಗೂ ಕಂಪನಿಯ ದಾಖಲೆಗಳನ್ನು ನಾವು ಪರೀಕ್ಷಿಸಿರುವಂತೆ, ನಿರ್ವಿವಾದ ಶಾಸನಬದ್ಧ ಬಾಕಿಗಳಾದ ಪ್ರಾವಿಡೆಂಟ್ ಫಂಡ್, ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೇವಾ

ತೆರಿಗೆ, ಕಸ್ಟಮ್ ಡ್ಯೂಟಿ, ಅಬಕಾರಿ ಸುಂಕ, ತೆರಿಗೆ ಸೇರಿದಂತೆ ಯಾವುದೇ ಇತರ ಅನ್ವಯಿಸುವ ಶಾಸನಬದ್ಧ ಬಾಕಿಗಳನ್ನು ಸಾಮಾನ್ಯವಾಗಿ ನಿಯಮಿತವಾಗಿ ಸೂಕ್ತ ಪ್ರಾಧಿಕಾರಗಳಿಗೆ ಠೇವಣಿ ಮಾಡಲಾಗಿದೆ. ಕೆಲವು ಸಂಗತಿಗಳನ್ನು ಹೊರತುಪಡಿಸಿ, ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ 31 ಮಾರ್ಚ್ 2017 ಕ್ಕೆ ಕೊನೆಗೊಂಡಂತೆ, ಕಂಪನಿ ಪಾವತಿಸಲು ಅರ್ಹತೆ ಪಡೆದ ಆರು ತಿಂಗಳಿನಿಂದ ಯಾವುದೇ ಶಾಸನಬದ್ಧ ಬಾಕಿಯನ್ನು ಉಳಿಸಿಕೊಂಡಿರುವುದಿಲ್ಲ.

(ಬಿ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಟಿಪ್ಪಣಿ ಸಂಖ್ಯೆ 26.1 ರಲ್ಲಿ ಕೆಲವು ಪ್ರಕರಣಗಳನ್ನು ಹೊರತುಪಡಿಸಿ, ಆದಾಯ ತೆರಿಗೆ, ಸಂಪತ್ತು ತೆರಿಗೆ, ಸೇವಾ ತೆರಿಗೆ, ಮಾರಾಟ ತೆರಿಗೆ, ಕಸ್ಟಮ್ಸ್ ಸುಂಕ ಮತ್ತು ಅಬಕಾರಿ ಸುಂಕಗಳ ಕಟ್ಟಬೇಕಾದ ಯಾವುದೇ ಮೊತ್ತವನ್ನು ಯಾವುದೇ ವಿವಾದಗಳಿಂದ ಸೂಕ್ತ ಪ್ರಾಧಿಕಾರಗಳಿಗೆ ಠೇವಣಿ ಮಾಡಿರುವುದಿಲ್ಲ.

**8. ಹಣಕಾಸು ಸಂಸ್ಥೆ, ಬ್ಯಾಂಕ್ ಅಥವಾ ಡಿಬೆಂಚರ್‌ಗಳ ಬಾಕಿಗಳಿಗೆ ಸಂಬಂಧಿಸಿದಂತೆ**

ನಮ್ಮ ಲೆಕ್ಕಪರಿಶೋಧನೆ ವಿಧಾನ ಮತ್ತು ಮಾಹಿತಿ ಹಾಗು ಆಡಳಿತ ಮಂಡಳಿ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಪ್ರಸಕ್ತ ಸಾಲಿನಲ್ಲಿ ಹಣಕಾಸು ಸಂಸ್ಥೆ, ಬ್ಯಾಂಕ್ ಅಥವಾ ಡಿಬೆಂಚರ್ ಹೊಂದಿರುವವರಿಗೆ ಬಾಕಿ ಮರುಪಾವತಿಯಲ್ಲಿ ಕರ್ತವ್ಯಲೋಪ ಎಸಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತೇವೆ.

9. ನಮ್ಮ ಅಭಿಪ್ರಾಯದ ಪ್ರಕಾರ ಮತ್ತು ಆಡಿಟ್ ಸಂದರ್ಭದಲ್ಲಿ ನಮಗೆ ನೀಡಲಾದ ಮಾಹಿತಿ ಪ್ರಕಾರ ಕಂಪನಿಯು ಸಾರ್ವಜನಿಕರಿಂದ ಯಾವುದೇ ರೀತಿಯ ಬಂಡವಾಳವನ್ನು ಮತ್ತು ಸಾಲವನ್ನು ಪಡೆದಿರುವುದಿಲ್ಲ.

10. ಲೆಕ್ಕಪತ್ರ ತಪಾಸಣೆ ಸಂದರ್ಭದಲ್ಲಿ ಕಂಪನಿಯಿಂದಾಗಲಿ ಅಥವಾ ಕಂಪನಿಯ ಅಧಿಕಾರಿ, ಉದ್ಯೋಗಿಗಳಿಂದಾಗಲಿ ಯಾವುದೇ ವಂಚನೆ ವ್ಯವಹಾರಗಳು ಜರಗಿರುವುದಿಲ್ಲ.

11 ನಮ್ಮ ಅಭಿಪ್ರಾಯದ ಪ್ರಕಾರ ಕಂಪನಿಯು ಸರ್ಕಾರಿ ಸ್ವಾಮ್ಯದ ಕಂಪನಿಯಾಗಿರುವುದರಿಂದ 3 (xi) ರ ಪ್ರಕಾರ ನಿಯಮಗಳು ಈ ಕಂಪನಿಗೆ ಅನ್ವಯಿಸುವುದಿಲ್ಲ.

12. ಕಂಪನಿಗಳ ಕಾಯಿದೆ, 2013 ಕಾಲಂ 406(1) ರ ಪ್ರಕಾರ ಈ ಕಂಪನಿಯು 'Nidhi' ಕಂಪನಿಯಾಗಿರುವುದಿಲ್ಲ.

13. ಕಂಪನಿಗಳ ಕಾಯಿದೆ, 2013 ಕಾಲಂ (177) ಮತ್ತು (188) ರ ಪ್ರಕಾರ ಎಲ್ಲಾ ವ್ಯವಹಾರಗಳು ನಡೆದಿದ್ದು, ಸಂಬಂಧಿಸಿದ ವಿವರಗಳನ್ನು ಲೆಕ್ಕಪತ್ರಗಳ ಕೋಷ್ಠಕದಲ್ಲಿ ತೋರಿಸಲಾಗಿದೆ.

14. ಲೆಕ್ಕ ಪತ್ರಗಳ ತಪಾಸಣೆ ಸಂದರ್ಭದಲ್ಲಿ ಒದಗಿಸಲಾದ ಮಾಹಿತಿಗಳ ಪ್ರಕಾರ ಕಂಪನಿಯು ಯಾವುದೇ ಷೇರು ಅಥವಾ ಡಿಬೆಂಚರ್‌ಗಳನ್ನು ನೀಡಿರುವುದಿಲ್ಲ.

15. ಕಂಪನಿಯು ಆಡಳಿತ ಮಂಡಳಿ ನಿರ್ದೇಶಕರೊಡನೆ ಹಾಗೂ ನಿರ್ದೇಶಕರುಗಳ ಸಂಬಂಧಿಕರೊಡನೆ ಯಾವುದೇ ನಗದೇತರ ವ್ಯವಹಾರಗಳನ್ನು ನಡೆಸಿರುವುದಿಲ್ಲ.

16 ನಮ್ಮ ಅಭಿಪ್ರಾಯದಲ್ಲಿ ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾ ಕಾಯಿದೆ, 1934ರ ಕಾಲಂ 45–IA ಪ್ರಕಾರ ಕಂಪನಿಯು ನೊಂದಾವಣೆಗೊಳ್ಳುವ ಅವಶ್ಯಕತೆ ಇರುವುದಿಲ್ಲ.

**ಕಿಚ್ಚ ಅಂಡ್ ಪ್ರಭು ಕೇಶವನ್**
**ಚಾರ್ಟಡ್ ಅಕೌಂಟೆಂಟ್ಸ್ ಪರವಾಗಿ**
**ಎಫ್‌ಆರ್‌ಎನ್: 050108S**

**ಸಹಿ/–**
**ಎ. ಉಷ**
**(ಪಾಲುದಾರರು)**
**ಸದಸ್ಯತ್ವ ಸಂಖ್ಯೆ: 218313**

**ಸ್ಥಳ: ಚೆನ್ನೈ**
**ದಿನಾಂಕ: 25–07–2017**

**ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್, ಮೈಸೂರು. ಇದರ 31ನೇ ಮಾರ್ಚ್ 2017 ಕ್ಕೆ ಕೊನೆಗೊಂಡ ವರ್ಷದ ಮೇಲೆ ಕಂಪನಿ ಕಾಯ್ದೆ 2013 ರ ಅಧಿನಿಯಮ 143 (6) (b) ನೇ ಪ್ರಕರಣದ ಮೇರೆಗೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಅವರ ಟಿಪ್ಪಣಿಗಳು.**

ಕಂಪನಿ ಕಾಯ್ದೆ 2013ರ ಅನ್ವಯ ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್, ಮೈಸೂರು, ಇವರ 31ನೇ ಮಾರ್ಚ್ 2017 ಕ್ಕೆ ಅಂತ್ಯಗೊಂಡ ಅವಧಿಗೆ ಹಣಕಾಸು ವಿವರಣಾ ಪಟ್ಟಿಯನ್ನು ಹಣಕಾಸು ವರದಿಯ ಚೌಕಟ್ಟಿನ ಅನ್ವಯ ತಯಾರುಮಾಡಬೇಕಾಗಿರುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದ್ದು, ಸದರಿ ಹಣಕಾಸು ವಿವರಣ ಪಟ್ಟಿಯ ಮೇಲೆ ಭಾರತದ ಕಂಪ್ಟ್ರೋಲರ್ ಮತ್ತು ಅಡಿಟರ್ ಜನರಲ್‌ರವರಿಂದ ಅಧಿ ನಿಯಮ 139(5) ನೇ ಪ್ರಕರಣದ ಅನ್ವಯ ನೇಮಕಗೊಂಡ ಶಾಸನಬದ್ಧ ಲೆಕ್ಕ ಪರಿಶೋಧಕರು ಕಾಯ್ದೆ ನಿಯಮ 143ರ ಅನ್ವಯ ಸ್ವತಂತ್ರವಾಗಿ ಕಂಪನಿ ಕಾಯ್ದೆ 2013 ರ ನಿಯಮ 143(10) ಇದರ ಪ್ರಕಾರ ನಿಗಧಿಗೊಳಿಸಿರುವ ಲೆಕ್ಕಪರಿಶೋಧನಾ ನಿಯಮ ಹಾಗೂ ಮಾನದಂಡಗಳ ಪ್ರಕಾರ ಲೆಕ್ಕಪರಿಶೋಧನೆ ಮಾಡಿರುವುದಾಗಿ ಅವರ ವರದಿ ದಿನಾಂಕ 25.07.2017ರಲ್ಲಿ ತಿಳಿಸಲಾಗಿದೆ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ ನಾನು ಮೈಸೂರು ಪೆಯಿಂಟ್ ಮತ್ತು ವಾರ್ನಿಷ್ ಲಿಮಿಟೆಡ್, ಮೈಸೂರು, ರವರ 31ನೇ ಮಾರ್ಚ್, 2017ಕ್ಕೆ ಅಂತ್ಯಗೊಂಡ ಲೆಕ್ಕ ಪತ್ರಗಳ ಮೇಲೆ ಕಂಪನಿ ಕಾಯ್ದೆ 2013ರ ಅಧಿನಿಯಮ 143(6) (ಎ) ಪ್ರಕಾರ ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಸಂಸ್ಥೆಯ ಹಣಕಾಸು/ಲೆಕ್ಕಪತ್ರಗಳ ಬಗ್ಗೆ ಸಪ್ಲಿಮೆಂಟರಿ ಆಡಿಟ್ ಮಾಡದಿರಲು ನಿರ್ಧರಿಸಲಾಗಿದೆ.

ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಪರವಾಗಿ
ಸಹಿ/-
**(ಬಿಜಿತ್ ಕುಮಾರ್ ಮುಖರ್ಜಿ)**
**ಪ್ರಧಾನ ಮಹಾಲೇಖಪಾಲರು**
(ಆರ್ಥಿಕ ಮತ್ತು ಕಂದಾಯ ವಿಭಾಗ ಆಡಿಟ್)
ಕರ್ನಾಟಕ, ಬೆಂಗಳೂರು

ಸ್ಥಳ : ಚೆನ್ನೈ
ದಿನಾಂಕ : 23.08.2017

# Mysore Paints & Varnish Limited, Mysore

New Bannimantap Extension, Mysuru - 570 015

**Sri H.A. Venkatesh**
Chairman

**Dr. Chandrashekara Doddamani**
Managing Director

**DIRECTORS :**

| | | |
|---|---|---|
| **Smt N.R. Jaganmatha** | : | Director |
| **Sri C.B. Shankara** | : | Director |
| **Sri Siddaramegowda** | : | Director |
| **Sri Seeganayaka** | : | Director |
| **Sri Sudesh Babu** | : | Director |
| **Smt Yashodha Moote Bennuru** | : | Director |
| **Smt Nalini Virayaraje Urs** | : | Director |

| | | | |
|---|---|---|---|
| **AUDITORS :** | : | | **Khicha & Prabu Kesavan**<br>Chartered Accountants,<br>Chennai - 10 |
| **COST AUDITORS:** | : | | **M/s R. Purushothaman**<br>Cost Accountants, Mysuru |
| **BANKERS :** | : | | **State Bank of India**<br>Market Branch,<br>Mysuru |
| **LEGAL ADVISORS** | : | 1) | **Sri A. C. Narendra**<br>Advocate,<br>Mysuru |
| | | 2) | **Sri Shashidhar**<br>Advocate<br>Mysuru |
| **COMPANY SECRETARY** | : | | **Sri N. Rajesh**<br>Practising Company Secretary<br>Mysuru - 26 |

## Registered Office and Factory

# Mysore Paints & Varnish Limited, Mysore

New Bannimantap Extension, Mysuru - 570 015
**Telephone : 0821-2493831, 2497469, 2492396**
**Fax : 0821-2499466 E-mail : info@mysorepaints.com**
**Website : www.mysorepaints.com**
**CIN No. : U51434KA1947SGC000503**

## SALES DEPOTS

**MYSURU**
No. 21, Dhanvanthri Road,
Mysuru - 570 015
Phone : 0821-2429138

**MADURAI**
No. 69, (Upstairs)
South Masi Street,
Madurai - 625 001
Phone : 0452-2744671

## Regional Office

**BANGALORE**
Mysugar Building, First Floor
J.C. Road, Bangalore - 5600 02
Phone : 080-22236608

# MYSORE PAINTS AND VARNISH LIMITED
# (CIN - U51434KA1947SGC000503)

**e-mail id : info@mysorepaints.com / www.mysorepaints.com**

**Phone – 0821 – 2493831 / 2497469  Fax – 0821-2499466**

New Bannimantap Extension, P.O,

**MYSORE – 570015**

## NOTICE

**NOTICE** is hereby given that the 71stAnnual General Meeting of the Shareholders of the Company will be held on 26th September, 2017 at 3.30 pm at the Registered Office of the Company to transact the following business:

**ORDINARY BUSINESS:**

1. To discuss, approve and adopt the Audited Balance Sheet as at 31st March 2017, Profit and Loss Statement for the year ended 31st March 2017 and the Cash Flow Statement, along with the Schedules and Notes attached thereto together with the reports of the Board of Directors and Auditors thereon.
2. To declare Dividend on Equity Shares for the Financial Year ended on 31st March 2017.
3. To appoint a Director in place of Mr C.B Shankar (holding DIN: 0007907865) who retires by rotation and being eligible, offers himself for reappointment.
4. To fix the remuneration payable to the Statutory Auditors of the Company.

Place: Mysore
Date: 30-08-2017

By Order of the Board
**For Mysore Paints & Varnish Limited**

**Sd/-**
**(Dr. Chandrashekhar Doddamani)**
Managing Director
(DIN – 0007918061)

**Notes:**

1. A MEMBER ENTITLED TO ATTEND AND VOTE AT THE MEETING IS ENTITLED TO APPOINT A PROXY TO ATTEND AND VOTE ON HIS / HER BEHALF AND SUCH A PROXY NEED NOT BE A MEMBER OF THE COMPANY. A PERSON CAN ACT AS A PROXY ON BEHALF OF MEMBERS NOT EXCEEDING FIFTY AND HOLDING IN THE AGGREGATE NOT MORE THAN TEN PERCENT OF THE TOTAL SHARE CAPITAL OF THE COMPANY CARRYING VOTING RIGHTS. A MEMBER HOLDING MORE THAN TEN PERCENT OF THE TOTAL SHARE CAPITAL OF THE COMPANY CARRYING VOTING RIGHTS MAY APPOINT A SINGLE PERSON AS PROXY AND SUCH PERSON SHALL NOT ACT AS A PROXY FOR ANY OTHER PERSON OR SHAREHOLDER.
2. THE INSTRUMENT APPOINTING THE PROXY MUST BE DEPOSITED AT THE REGISTERED OFFICE OF THE COMPANY, DULY COMPLETED AND SIGNED, NOT LESS THAN 48 HOURS BEFORE THE COMMENCEMENT OF THE MEETING. PROXIES SUBMITTED ON BEHALF OF THE COMPANIES, SOCIETIES, ETC., MUST BE SUPPORTED BY AN APPROPRIATE RESOLUTION / AUTHORITY AS APPLICABLE.
3. Members/ Proxies should bring duly filled Attendance Slips sent herewith to attend the Meeting.
4. The Register of Members and Share Transfer Books will remain closed from 17-09-2017 to 26-09-2017 (Both days inclusive) for the purpose of payment of Dividend.
5. Subject to the provisions of the Companies Act, 2013, Dividend as recommended by the Board of Directors, if declared at the Meeting, shall be paid within a period of 30 days from the date of declaration to those members whose names appear on the Register of Members as on 26-10-2017 (initial closure Date)
6. Members are requested to send their requests for any additional information on the Financials of the Company for the period ended 31st March, 2017 at least 7 (Seven) days before the scheduled date of the Meeting.
7. Members are requested to notify changes in their postal/ email addresses and all other correspondences including Dividend matters to the Company Secretary- In Charge, Mysore Paints & Varnish Limited, New Bannimantap Extension, Mysore 570 015 or through email : info@mysorepaints.com

8. Every member entitled to vote at the Annual General Meeting of the Company can inspect the proxies lodged at the Company at any time during the business hours of the Company during the period beginning twenty four hours before the time fixed for the commencement of the Annual General Meeting and ending on the conclusion of the meeting. However, a prior notice of not less than 3 (three) days in writing of the intentions to inspect the proxies lodged shall be required to be provided to the Company.

9. Members who wish to claim Dividend, which remained unclaimed, are requested to correspond with Company Secretary- In Charge, at the Registered Office of the Company. Members are requested to note that Dividends not enchased or not claimed within seven years from the date of transfer to the Company's Unpaid Dividend Account, will, as per Section 124 of the Companies Act, 2013, (Section 205A of the erstwhile Companies Act, 1956), be transferred to "Investor Education and Protection Fund" (IEPF) established by the Central Government. Further Shares in respect of such Dividend shall also be transferred to IEPF.

10. MPVL is concerned about the environment and utilizes natural Resources in a sustainable way. Ministry of Corporate Affairs (MCA), Government of India, through its Circular Nos. 17/2011 and 18/2011, dated April 21,2011 and April 29, 2011 respectively, has allowed Companies to send official documents to their shareholders electronically as a part of its green initiatives in Corporate Governance. Recognizing the spirit of the circular issued by the MCA, we henceforth propose to send documents such as Notice convening the General Meeting, Financial Statements, Directors Report, Auditors Report, etc to the email address provided by shareholders to the Company. The Company wishes to go completely paperless and cooperation in this regard is solicited from the Shareholders of the Company. The Shareholders, who wish to receive the Annual Report of the Company through e-mail may provide their e-mail address to the Company.

    Please Note that the Annual Report of the Company will also be available on the Company's website www.mysorepaints.com for ready reference.

11. The Securities and Exchange Board of India (SEBI) has mandated the submission of the Permanent Account Number (PAN) by every participant in the Securities Market. Therefore, Members are requested to submit their PAN details to the Company.

## DIRECTORS' REPORT.

Dear Members,

On behalf of the Board of Directors, I take pleasure in presenting the 71st Board's Report on the performance of your Company, together with the Audited Financial Statements and Auditor's Report for the Financial Year ended on 31st March 2017.

### 1. STATE OF COMPANY'S AFFAIRS

Your Company is into the business of Manufacture of paints, varnishes and indelible ink. Steps are constantly taken to augment the potential and profitability of the Company. The Company has not forayed into any new business or venture during the Financial Year under report.

### 2. RESULTS OF OPERATION (Rs in Lakhs)

| Particulars | 2016-17 | 2015-16 |
|---|---|---|
| Turnover (Gross) | 2846.93 | 3,823.80 |
| Other Income | 295.17 | 264.42 |
| Total Expenses | 2215.90 | 2,420.93 |
| Profit before Tax | 618.96 | 1250.36 |
| Profit after Tax | 404.07 | 813.73 |

The Company manufactured 507.470 MT (Previous Year 391.00 MT) of paints & allied products.

### 3. DIVIDEND

